ಸಂಪುಟ : 8 ಸಂಚಿಕೆ :300 ಪುಟ : 4 ಬೆಲೆ : 3.00 ಬುಧವಾರ ಜನವರಿ 10, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 300 Pages : 4 Price : 3.00 Wednesday JANUARY 10, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 10 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂ. 2 ಸೆಟ್ಲಮೆಂಟ್ ಗಾಂಧಿನಗರ, ಹನುಮಂತ ದೇವರ ಗುಡಿ, ಸ್ಲಾಬ್ ಮನೆ ಶಿಪ್ ಪೂರ್ತಿ ಭಾಗಗಳು, ವಾರ್ಡ್ ನಂ. 15,16 ರಲ್ಲಿ ಶಹಾಪುರ್ ಪೇಟೆ, ಜವಳಗಲ್ಲಿ, ಗಾಂಧಿ ಸರ್ಕಲ್, ಮಹೇಂದ್ರಕರ್ ಸರ್ಕಲ್, ಗಣೇಶ ಗುಡಿ ಲೈನ್, ಶರಣಬಸವೇಶ್ವರ ಗುಡಿ ಲೈನ್, ಡಿಸಿ ಮಿಲ್ ರಸ್ತೆ ಉಳಿದ ಭಾಗಗಳು,

ವಾರ್ಡ್ ನಂ. 22ರಲ್ಲಿ ಅಮರೇಶ್ವರ ನಗರ, ತಾಜನಗರ, ಬನ್ನಿ ಮಹಾಕಾಳಿ ಗುಡಿ ಲೈನ್, ವಾರ್ಡ್ ನಂ. 29ರಲ್ಲಿ ರಾಜೀವ್ ಗಾಂಧಿ ನಗರದ ಕೆಲವು ಭಾಗಗಳು, ವಾರ್ಡ್ ನಂ. 19, 16, 25, 18 ಅಂಬೇಡ್ಕರ್ ನಗರ, ಮಡಿವಾಳ ದೇವಸ್ಥಾನ, ಬಾಗಲಕೋಟೆ ಅವರ ಲೈನ್, ಚವ್ಹಣವರ ಲೈನ್, ವಾರ್ಡ್‌ನ ಕೆಲವು ಭಾಗಗಳು, ವಾರ್ಡ್ ನಂ. 26, 24ರಲ್ಲಿ ಅಬ್ಬಿಗೇರಿ ಕಂಪನಿ, ಹಳೆ ಡಿಸಿ ಆಫೀಸ್ ಲೈನ್, ತೆಗ್ಗಿನ್ ಲಾಟ್, ಮಕಾನ್‌ಗಲ್ಲಿ, ಉಡಚಮ್ಮನ ಗುಡಿ ಲೈನ್, 76 ಪ್ಲಾಟ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಸತಿ ರಹಿತರ ಸಮೀಕ್ಷೆ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಡೇ ನಲ್ಮ್ ಯೋಜನೆ ಅಡಿಯಲ್ಲಿ ಪುರಸಭೆ ಮುಂಡರಗಿ ವ್ಯಾಪ್ತಿಯಲ್ಲಿ ಬರುವ ವಸತಿ ರಹಿತರ ಸಮೀಕ್ಷೆಯನ್ನು ಜನವರಿ 18ರಂದು ಹಾಗೂ ಜನವರಿ 25ರಂದು ಸ್ವಯಂ ಸೇವಾ ಸಂಸ್ಥೆ ಮೂಲಕ (ಎನ್.ಜಿ.ಓ ) ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಸಹಕರಿಸಬೇಕೆಂದು ಮುಂಡರಗಿ ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀ ಅನ್ನದಾನೇಶ್ವರ ಪ.ಪೂ ಮಹಾವಿದ್ಯಾಲಯದಲ್ಲಿ 'ಅಕ್ಷರ ಗ್ರಂಥಾಲಯ' ಉದ್ಘಾಟಿಸಿದ ಶಾಸಕ ಜಿ.ಎಸ್. ಪಾಟೀಲ

# ಪ್ರಾಮಾಣಿಕತೆ ನಿಮ್ಮನ್ನು ಸದಾಕಾಲ ಕಾಪಾಡುತ್ತದೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನಿಮಗಾಗಿ, ನಿಮ್ಮ ವಿದ್ಯಾಭ್ಯಾಸದ ಏಳಿಗೆಗಾಗಿ ಪೂಜ್ಯ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಅಕ್ಷರ ಗ್ರಂಥಾಲಯವನ್ನು ನಿರ್ಮಿಸಿ ಕೊಟ್ಟಿದ್ದಾರೆ. ಇದರ ಸದುಪಯೋಗವನ್ನು ಪಡೆದುಕೊಂಡು ನೀವೆಲ್ಲರೂ ಪ್ರತಿಭಾ ಸಂಪನ್ನರಾಗಿ ಮೆರೆಯಬೇಕೆಂದು ರೋಣ ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಮಂಗಳವಾರ ನೂತನ ಅಕ್ಷರ ಗ್ರಂಥಾಲಯವನ್ನು ಉದ್ಘಾಟಿಸಿ ಶಾಸಕರು ಮಾತನಾಡಿದರು.

ಸರಕಾರಿ ಶಿಕ್ಷಣ ಸಂಸ್ಥೆಗಳಿಲ್ಲದ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಕ್ರಾಂತಿಗೆ ಮಠಗಳು ಮುನ್ನುಡಿ ಬರೆದವು. ಇದರಿಂದ ಗ್ರಾಮೀಣ ಪ್ರದೇಶದ ಲಕ್ಷಾಂತರ ವಿದ್ಯಾರ್ಥಿಗಳ ಜೀವನದಲ್ಲಿ ಬೆಳಕು



> ನಿಮ್ಮ ಮುಂದಿನ ಜೀವನದಲ್ಲಿ ನೀವು ನಿಷ್ಠೆ ಮತ್ತು ಪ್ರಾಮಾಣಿಕತೆಯೊಂದಿಗೆ ಮುನ್ನಡೆಯಿರಿ. ಅದು ನಿಮ್ಮನ್ನು ಸದಾಕಾಲ ಕಾಪಾಡುತ್ತದೆ. ಈ ಸಂಸ್ಥೆಯಲ್ಲಿ ಶಿಕ್ಷಣದೊಂದಿಗೆ ಅಂತಹ ಸಂಸ್ಕಾರ ಸಿಗುತ್ತದೆ. ನಿಮ್ಮ ಅಧ್ಯಯನಕ್ಕೆ ಬೆಂಬಲವಾಗಿ ರಚನೆಗೊಂಡಿರುವ ಈ ಗ್ರಂಥಾಲಯದ ಉಪಯೋಗವನ್ನು ಪಡೆದುಕೊಂಡು ಮುಂಬರುವ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಸಾಧಿಸಿ. ಬರುವ ಮಾರ್ಚ್ ಒಳಗಾಗಿ ಈ ಸಂಸ್ಥೆಗೆ 50 ಲಕ್ಷ ರೂ.ಗಳ ಅನುದಾನ ನೀಡುತ್ತೇನೆ.
>
> **– ಜಿ.ಎಸ್. ಪಾಟೀಲ.** ಶಾಸಕರು, ರೋಣ.

ಮೂಡಲು ಕಾರಣವಾಯಿತು. ಅಂತಹ ಮಠಮಾನ್ಯಗಳಲ್ಲಿ ಹಾಲಕೆರೆಯ ಶ್ರೀ ಅನ್ನದಾನೇಶ್ವರ ಮಠವೂ ಒಂದು. ಜ್ಞಾನ ದಾಸೋಹದ ಜೊತೆಗೆ ಅನ್ನ ದಾಸೋಹವನ್ನೂ ನೀಡಿ ಲಕ್ಷಾಂತರ ಜನರ ಬಾಳನ್ನು ಬೆಳಗಿದ ಕೀರ್ತಿ ಶ್ರೀ ಅನ್ನದಾನೇಶ್ವರ ಮಠಕ್ಕೆ ಸೇರುತ್ತದೆ. ಲಿಂ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳು ಈ ಮಠದ ಪೀಠಾಧಿಪತಿಗಳಾದ ನಂತರ ಇಲ್ಲಿನ ಶಿಕ್ಷಣ ಸಂಸ್ಥೆಗಳಿಗೆ ಒಂದು ಮೆರಗು ಬಂದಿದೆ. ನಕಲು ರಹಿತ ಪರೀಕ್ಷೆಗಳನ್ನು ನಡೆಸಿದ ಕೀರ್ತಿ ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರಿಗೆ ಸಲ್ಲುತ್ತದೆ ಎಂದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ನಿಮ್ಮ ತಂದೆ-ತಾಯಿಗಳು ಕಂಡಿರುವ ಕನಸನ್ನು ನನಸು ಮಾಡಲು ಶ್ರಮಿಸಬೇಕು. ಅದಕ್ಕೆ ಶಿಕ್ಷಣ ಮತ್ತು ಸಂಸ್ಕಾರಗಳು ಸಹಾಯಕವಾಗುತ್ತವೆ. ಈ ಎರಡೂ ಮೌಲ್ಯಗಳನ್ನು ಇಲ್ಲಿಂದ ಕಲಿತುಕೊಂಡು ಜೀವನದಲ್ಲಿ ಉಜ್ವಲ ಭವಿಷ್ಯವನ್ನು ಪಡೆಯಿರಿ. ನಿಮ್ಮ ಕಲಿಕೆಗೆ ಅನುಕೂಲವಾಗಲೆಂದು ಇಂದು ಈ ಅಕ್ಷರ ಗ್ರಂಥಾಲಯವನ್ನು ನಿರ್ಮಿಸಿ, ಉದ್ಘಾಟಿಸಲಾಗಿದೆ ಎಂದು ಶ್ರೀಗಳು ತಿಳಿಸಿದರು.

> ಮೊದಲಿನಿಂದಲೂ ರೋಣದ ಪಾಟೀಲ ಮನೆತನವು ಶ್ರೀಮಠದೊಂದಿಗೆ ಅವಿನಾಭಾವ ಸಂಬಂಧವನ್ನು ಬೆಳೆಸಿಕೊಂಡು ಬಂದಿದೆ. ಅವರಲ್ಲಿನ ಉದಾರತೆ ಸಾರ್ವಜನಿಕ ವಲಯದಲ್ಲಿ ಕಾಣುತ್ತಿದೆ. ಅದರ ದ್ಯೋತಕವಾಗಿ ಇಂದು ಈ ಅಕ್ಷರ ಗ್ರಂಥಾಲಯವನ್ನು ಉದ್ಘಾಟಿಸಿದ ಶಾಸಕರು ಸಂಸ್ಥೆಗೆ 50 ಲಕ್ಷ ರೂಪಾಯಿಗಳ ಅನುದಾನ ನೀಡುವ ಘೋಷಣೆ ಮಾಡಿದ್ದು, ಅವರ ಶೈಕ್ಷಣಿಕ ಪ್ರೀತಿಗೆ ಸಾಕ್ಷಿಯಾಗಿದೆ ಎಂದು ಶ್ರೀಗಳು ತಿಳಿಸಿದರು.

▸▸3ನೇ ಪುಟಕ್ಕೆ

### ಹೊಂಬಳದಲ್ಲಿ 'ಹಿಂಗಾರು ಬೆಳೆಗಳಲ್ಲಿ ಸಮಗ್ರ ನಿರ್ವಹಣೆ' ಪ್ರಾತ್ಯಕ್ಷಿಕೆ-ಚರ್ಚೆ

# ಸಶಕ್ತ ಭೂಮಿಯಿಂದ ಸದೃಢ ಬೆಳೆ ಸಾಧ್ಯ



■ವಿಜಯಸಾಕ್ಷಿ ಸುದ್ದಿ, ಗದಗ

ರೈತರು ಒಣಬೇಸಾಯ ಪದ್ಧತಿಯಲ್ಲಿ ಮಣ್ಣಿನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಸಾವಯವ ಕೃಷಿ ಬೆಳೆಯ ಅವಶೇಷಗಳನ್ನು ಕೃಷಿ ಭೂಮಿಯಲ್ಲಿ ಮರುಬಳಕೆ ಮಾಡುವ ಮೂಲಕ ಮಣ್ಣಿನ ಸತ್ವ, ಫಲವತ್ತತೆಯನ್ನು ಕಾಯ್ದುಕೊಳ್ಳಬಹುದಾಗಿದೆ ಎಂದು ಧಾರವಾಡ ಕೃವಿವಿ ಕುಲಪತಿ ಡಾ. ಪಿ.ಎಲ್. ಪಾಟೀಲ ಹೇಳಿದರು.

ಅವರು ಮಂಗಳವಾರ ಗದಗ ತಾಲೂಕಿನ ಹೊಂಬಳ ಗ್ರಾಮದ ಕೃಷಿ ಸಂಶೋಧನಾ ಕೇಂದ್ರದಲ್ಲಿ ಧಾರವಾಡ ಕೃವಿವಿ ಹಾಗೂ ಹೊಂಬಳ ಕೃಷಿ ಸಂಶೋಧನಾ ಕೇಂದ್ರದಿಂದ ಏರ್ಪಡಿಸಿದ್ದ 'ಹಿಂಗಾರು ಬೆಳೆಗಳಲ್ಲಿ ಸಮಗ್ರ ನಿರ್ವಹಣೆ ಪ್ರಾತ್ಯಕ್ಷಿಕೆ ಮತ್ತು ಚರ್ಚೆ' ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

> ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹೊಂಬಳ ಗ್ರಾ.ಪಂ ಅಧ್ಯಕ್ಷೆ ಭೀಮಕ್ಕ ಹಾಲಣ್ಣವರ ಮಾತನಾಡಿದರು. ವಿಶೇಷ ಆಹ್ವಾನಿತರಾಗಿ ಧಾರವಾಡ ಕೃವಿವಿ ಸಂಶೋಧನಾ ನಿರ್ದೇಶಕ ಡಾ. ಬಿ.ಡಿ. ಬಿರಾದಾರ, ಡಾ.ಅಶೋಕ ಸಜ್ಜನ, ಡಾ.ಎ.ಜಿ. ವಿಜಯಕುಮಾರ, ಡಾ.ಲಿಂಗರಾಜ ಕುರಗುಂದ, ಹೊಂಬಳ ಗ್ರಾ.ಪಂ ಉಪಾಧ್ಯಕ್ಷೆ ನೀಲವ್ವ ಬಾಳಮ್ಮನವರ ಪಾಲ್ಗೊಂಡಿದ್ದರು.

▸▸3ನೇ ಪುಟಕ್ಕೆ

### ವಿಕಲಚೇತನರ ಮುಕ್ತ ಸಿಟ್ಟಿಂಗ್ ಕಬಡ್ಡಿ ಪಂದ್ಯಾವಳಿ ಸಮಾರೋಪದಲ್ಲಿ ಯುವ ಮುಖಂಡ ಕೃಷ್ಣಗೌಡ ಪಾಟೀಲ

# ಕ್ರೀಡೆಗಳು ಮಾನಸಿಕ ಸದೃಢತೆಗೆ ಸಹಕಾರಿ



■ವಿಜಯಸಾಕ್ಷಿ ಸುದ್ದಿ, ಗದಗ

ಕ್ರೀಡೆ ಯವುದೇ ಇರಲಿ, ಭಾಗವಹಿಸುವ ಕ್ರೀಡಾ ಮನೋಭಾವನೆಯನ್ನು ಹೊಂದುವುದು ಅವಶ್ಯವಾಗಿದೆ. ಸೋಲು-ಗೆಲುವಿನ ಬಗ್ಗೆ ಚಿಂತಿಸಿದೇ ಕ್ರೀಡಾ ಸ್ಫೂರ್ತಿಯಿಂದ ಆಟವನ್ನು ಆಡಬೇಕು ಎಂದು ಯುವ ಮುಖಂಡ ಕೃಷ್ಣಗೌಡ ಎಚ್.ಪಾಟೀಲ ಹೇಳಿದರು.

ಅವರು ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಗದಗ ತಾಲೂಕಾ ವಿಕಲಚೇತನರ ಎಮ್‌ಆರ್‌ಡಬ್ಲ್ಯೂ, ವಿಆರ್‌ಡಬ್ಲ್ಯೂ ಮತ್ತು ಯುಆರ್‌ಡಬ್ಲ್ಯೂ ವಿವಿದ್ದೋದ್ದೇಶಗಳ ಕ್ಷೇಮಾಭೀವೃದ್ಧಿ ಸಂಘದ ಆಶ್ರಯದಲ್ಲಿ ನಡೆದ ರಾಜ್ಯ ಮಟ್ಟದ ವಿಕಲಚೇತನರ ಮುಕ್ತ ಸಿಟ್ಟಿಂಗ್ ಕಬಡ್ಡಿ ಪಂದ್ಯಾವಳಿಯ ಮುಕ್ತಾಯ ಸಮಾರಂಭದಲ್ಲಿ ಬಹುಮಾನ ವಿತರಿಸಿ ಮಾತನಾಡಿದರು.

ದೈಹಿಕ ವಿಕಲಚೇತನರು ಸಹ ಕಬಡ್ಡಿ ಆಡುತ್ತಿರುವುದು ನಿಜಕ್ಕೂ ನೋಡುಗರ ಕಣ್ಣಿಗೆ ಒಂದು ಹಬ್ಬದಂತೆ ಕಾಣುತ್ತಿದೆ. ಇಂತಹ ಆಟವನ್ನು ಹೆಚ್ಚು ಸಂಘಟಿಸಬೇಕು. ವಿಕಲಚೇತನರೂ ಸಹ ಇತರರಂತೆ ಎಲ್ಲ ಕ್ರೀಡೆಗಳಲ್ಲಿ ಬಾಗವಹಿಸಲು ಅನುಕೂಲ ಮಾಡಿಕೊಡಬೇಕು ಎಂದರು.

ಕ್ರೀಡಾಭಿಮಾನಿ ಪರಸುರಾಮ ಹಬೀಬ ಮಾತನಾಡಿ, ದೃಷ್ಟಿಚೇತನರಿಗೆ ಕ್ರಿಕೆಟ್ ಆಟಕ್ಕೆ ಪ್ರೋತ್ಸಾಹವನ್ನು ನೀಡುತ್ತಿರುವಂತೆಯೇ ಸಿಟ್ಟಿಂಗ್ ಕಬಡ್ಡಿಗೂ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಆ ನಿಟ್ಟಿನಲ್ಲಿ ಕಬಡ್ಡಿ ಕ್ರೀಡಾ ಕ್ಲಬ್‌ಗಳು ಮುಂದೆ ಬಂದು, ಈ ಆಟಕ್ಕೆ ಸಹಕಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ತಾ.ಪಂ ಮಾಜಿ ಅದ್ಯಕ್ಷ ದೇವರೆಡ್ಡಿ, ಪ್ರಕಾಶ ಗಾಣಗೇರ, ರೀಯಾನ್ ಅಬ್ಬಿಗೇರಿ( ಸಾಯಿ ದರ್ಬಾರ), ವಿಠಲ ತಳವಾರ, ಕಿತ್ತಲಿ, ಜಾಲಿಹಾಳ, ಸದಸ್ಯ ಶರಣಪ್ಪ ಮ್ಯಾಗೇರಿ, ಖಾಜಾಹುಸೇನ ಕಾತರಕಿ, ಎಸ್.ಡಿ. ಮಾದರ, ಸೇರಿದಂತೆ ಕ್ರೀಡಾಭಿಮಾನಿಗಳು ಪಾಲ್ಗೊಂಡಿದ್ದರು.

### ಮುರಡಿ ತಾಂಡಾದ ಶಾಲಾ ಭೂದಾನಿಗಳನ್ನು ಸನ್ಮಾನಿಸಿದ ಶಾಸಕ ಜಿ.ಎಸ್. ಪಾಟೀಲ

# ಶಾಲೆಗಳ ಅಭಿವೃದ್ಧಿಯಿಂದ ದೇಶ ಸುಭದ್ರ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಸ್ವಾತಂತ್ರ್ಯ ಹೋರಾಟಗಾರರು, ರಾಜಕೀಯ ನಾಯಕರು ದೇಶ ಸುಭದ್ರವಾಗಬೇಕು, ಶೈಕ್ಷಣಿಕ ಮಟ್ಟ ಸುಧಾರಿಸಬೇಕು ಎಂದು ನಿರ್ಮಿಸಿದ ಸರಕಾರಿ ಶಾಲೆಗಳು ಇಂದು ಶತಮಾನದ ಹೊಸ್ತಿಲಲ್ಲಿವೆ. ಶ್ರೀಮತಿ ರುಕ್ಮೀಣಿ ಹಾಮೇಶ ನಾಯಕರು ಶಾಲೆಗೆ 2 ಎಕರೆ 20 ಗುಂಟೆ ಜಾಗೆಯನ್ನು ದಾನವಾಗಿ ಕೊಡುವುದರ ಮೂಲಕ ದೇಶದ ಶಕ್ತಿಯನ್ನು ಹೆಚ್ಚಿಸಿರುವುದು ಪ್ರಶಂಸನೀಯ ಎಂದು ರೋಣ ಶಾಸಕ ಜಿ.ಎಸ್. ಪಾಟೀಲ್ ಹೇಳಿದರು.

ಇಲ್ಲಿನ ಡಂಬಳ ಹೋಬಳಿಯ ಮುರಡಿ ತಾಂಡಾ ಗ್ರಾಮದಲ್ಲಿ ಶಾಲೆಗೆ ಭೂದಾನ ನೀಡಿದ ರುಕ್ಮೀಣಿ ಕೋಂ ಹಾಮೇಶ ನಾಯಕ ಅವರನ್ನು ಸನ್ಮಾನಿಸಿ ಮಾತನಾಡಿದರು.

ರಾಜ್ಯದ ಜನರು ಉತ್ತಮ ಬದುಕು ನಡೆಸುವಂತಾಗಬೇಕು ಎಂಬ ಉದ್ದೇಶದಿಂದ ಮಹಿಳೆಯರು, ರೈತರು, ಕಾರ್ಮಿಕರು ಆರ್ಥಿಕವಾಗಿ ಮುಖ್ಯವಾಹಿನಿಗೆ ಬರಬೇಕು ಎನ್ನುವ ದೂರದೃಷ್ಟಿಯನ್ನು ಇಟ್ಟುಕೊಂಡು ಕಾಂಗ್ರೆಸ್ ಸರ್ಕಾರ ಉಚಿತ ಯೋಜನೆಗಳನ್ನು ನೀಡುತ್ತಿದೆ ಎಂದರು.

ಶಿರಹಟ್ಟಿ ಮತಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಶಾಲೆಗಳಲ್ಲಿ ಸಣ್ಣ ಪುಟ್ಟ ವಿಷಯಕ್ಕೆ ರಾಜಕಾರಣ ಮಾಡದೆ, ಶಾಲೆ ಹಾಗೂ ವಿದ್ಯಾರ್ಥಿಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದರು.



> ಮಿಥುನ ಜಿ.ಪಾಟೀಲ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳ ಭವಿಷ್ಯ ಕಟ್ಟಬೇಕು ಎನ್ನುವ ಹಂಬಲ ಎಲ್ಲರಲ್ಲಿಯೂ ಮೂಡಿದಾಗ ವಿದ್ಯಾರ್ಥಿಗಳೊಂದಿಗೆ ರಾಷ್ಟ್ರವೂ ಬಲಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ನಾಯಕ ಕುಟುಂಬ ಗ್ರಾಮದ ಶ್ರೇಯಸ್ಸಿಗೆ ಭೂದಾನ ಮಾಡಿರುವುದು ರಾಜ್ಯ, ರಾಷ್ಟ್ರದ ಶಕ್ತಿ ಹೆಚ್ಚಿಸಿದಂತಾಗಿದೆ ಎಂದು ಹೇಳಿದರು.

ಭೂದಾನಿಗಳಾದ ಅರುಣ ನಾಯಕ, ಗದಗ ಜಿಲ್ಲಾ ಡಿಡಿಪಿಐ ಎಮ್.ಎ. ರಡ್ಡೇರ, ಮುಂಡರಗಿ ಬಿಇಒ ಎಚ್.ಎಮ್. ಪಡ್ನೇಶ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷೆ ಶೋಭಾ ಕೊಡ್ಲಿ, ಉಪಾಧ್ಯಕ್ಷೆ ರೇಖಾ ಭಜಂತ್ರಿ, ಡಿ.ಎಸ್. ಭಜಂತ್ರಿ, ಅರುಣ ನಾಯಕ, ವಿ.ಬಿ. ಸೋಮನಕಟ್ಟಿ, ಬಸವರಾಜ ನವಲಗುಂದ, ಗೋಣಿಬಸಪ್ಪ ಕೊರ್ಲಹಳ್ಳಿ, ಬಸುರಾಜ ಪೂಜಾರ, ಪುಲಕೇಶಗೌಡ ಪಾಟೀಲ್, ಪರಶುರಾಮ ಅಳಗವಾಡಿ, ಹಾಲಪ್ಪ ಹರ್ತಿ, ಸುರೇಶ ಮಾಳಗಿಮನಿ, ಸುರೇಶ ಕಾರಬಾರಿ, ರಮೇಶ ಪವಾರ ಶಿವಪ್ಪ ಪವಾರ, ಮರಡೆಪ್ಪ ಹಳ್ಳಿ, ನಾಗೇಶ ಕಾರಬಾರಿ, ತಹಸೀಲ್ದಾರ ಧನಂಜಯ ಎಮ್, ಇಓ ವಿಶ್ವನಾಥ ಹೊಸಮನಿ, ರಂಜನಾ ತಳಗೇರಿ, ಜಿ.ಎಸ್. ಅಣ್ಣಿಗೇರಿ, ಎಸ್.ಎಚ್. ಕುಕನೂರ, ಎಂ.ಸಿ. ಮರಡೂರಮಠ, ಬಸುರಾಜ ಯಲಿವಾಳ, ಎಡಬ್ಲ್ಯುಇ ಅಶೋಕ ಕಣವಿ, ಎಇ ಮಂಜುನಾಥ ಕಲಬುರ್ಗಿ, ಲೋಕೇಶ ಮುರಡಿ, ಸುರೇಶ ಕಾರಬಾರಿ, ರಮೇಶ ಪವಾರ, ಶಿವಪ್ಪ ಪವಾರ, ಮರಡೆಪ್ಪ ಹಳ್ಳಿ, ನಾಗೇಶ ಕಾರಬಾರಿ, ಉಮೇಶ ಬೂದಿಹಾಳ ಮುಂತಾದವರಿದ್ದರು.

# ಜ.28 ರಂದು ಚಿತ್ರದುರ್ಗದಲ್ಲಿ ಶೋಷಿತರ ಸಮಾವೇಶ

■ವಿಜಯಸಾಕ್ಷಿ ಸುದ್ದಿ, ಗದಗ

ಚಿತ್ರದುರ್ಗದ ಬಸವ ಮೂರ್ತಿ ಮಾದಾರ ಚನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ ಜ. 28ರಂದು ಬೆಳಗ್ಗೆ 11ಕ್ಕೆ ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟ, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ, ಸಾಮಾಜಿಕ ನ್ಯಾಯ, ಸಹಬಾಳ್ವೆ ಮತ್ತು ಸ್ವಾಭಿಮಾನದ ಸಂರಕ್ಷಣೆಗಾಗಿ ಶೋಷಿತ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ ಹೇಳಿದರು.

ಪತ್ರಿಕಾಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತ, ಹಿಂದುಳಿದ, ಆದಿವಾಸಿ, ಅಲೆಮಾರಿ, ಅಲ್ಪಸಂಖ್ಯಾತ ಮತ್ತು ಜನಪರ ಸಂಘಟನೆಗಳನ್ನೊಳಗೊಂಡ




ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟವು ಸಂವಿಧಾನ, ಸಾಮಾಜಿಕ ನ್ಯಾಯ, ಸಹಬಾಳ್ವೆ ಮತ್ತು ಸ್ವಾಭಿಮಾನದ ಸಂರಕ್ಷಣೆಗಾಗಿ ಶೋಷಿತ ಜಾಗೃತಿ ಸಮಾವೇಶದ ಅಂಗವಾಗಿ 22 ಜಿಲ್ಲೆಗಳಲ್ಲಿ ಈಗಾಗಲೇ ಪ್ರಚಾರ ಕೈಗೊಂಡಿದ್ದು, ಎಲ್ಲೆಡೆ ವ್ಯಾಪಕ ಬೆಂಬಲ ಸಿಗುತ್ತಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ ಅವರಿಗೂ ಸಮಾವೇಶಕ್ಕೆ ಆಗಮಿಸುವಂತೆ ಮನವಿ ಮಾಡಲಾಗಿದೆ. ಉಳಿದಂತೆ ಸರ್ವಪಕ್ಷಗಳ ಹಿಂದುಳಿದ ನಾಯಕರು, ಮುಖಂಡರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಭಾರತವು ಹಲವು ವೈವಿದ್ಯತೆಯ ದೇಶವಾಗಿದ್ದು, ಸರ್ವಜನಾಂಗದ ಶಾಂತಿಯ ತೋಟವಾಗಿದೆ. ಆದರೆ, ಬ್ರಾಹ್ಮಣ ಶಾಹಿಯ ಕುತಂತ್ರದಿಂದಾಗಿ ದೇಶದ ಸಂಪತ್ತು ಸಮಾನವಾಗಿ ಹಂಚಿಕೆಯಾಗದೇ ಶೇ. 97ರಷ್ಟು ತಳಸಮುದಾಯಗಳು ಸಾವಿರಾರು ವರ್ಷಗಳಿಂದ ಸಂಕಷ್ಟಗಳನ್ನು ಎದುರಿಸುತ್ತ ಬಂದಿವೆ. ಕರ್ನಾಟಕ ರಾಜ್ಯವು ಅವಕಾಶ ವಂಚಿತ ಜಾತಿಗಳಿಗೆ ಮೀಸಲಾತಿ ನೀಡಿ, ಸಾಮಾಜಿಕ ಸಮಾನತೆ ಸಾರಿದೆ. ಹಲವು ಹಿಂದುಳಿದ ವರ್ಗಗಳ ಆಯೋಗವು ವೈಜ್ಞಾನಿಕ ಅಧ್ಯಯ ನಡೆಸಿ ಮೀಸಲಾತಿ ಜಾರಿಯಾಗಿದೆ. ಆದರೆ, ಬಲಾಢ್ಯರು ಶೋಷಿತರ ಪಾಲನ್ನು ಕಬಳಿಸುತ್ತಿರುವುದು ಶೋಚನೀಯವಾಗಿದೆ ಎಂದರು.

ಎಚ್. ಕಾಂತರಾಜು ವರದಿಯನ್ನು ರಾಜ್ಯ ಸರಕಾರವು ಈ ಕೂಡಲೇ ಸ್ವೀಕರಿಸಿ, ವರದಿಯನ್ನು ಯಥಾವತ್ತಾಗಿ ಅಂಗೀಕರಿಸಿ ಜಾರಿಗೊಳಿಸಬೇಕು. ಕೇಂದ್ರ ಸರಕಾರವು ಜಾತಿವಾರು, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಕೈಗೊಳ್ಳಬೇಕು. ಮಹಿಳಾ ರಾಜಕೀಯ ಮೀಸಲಾತಿಯನ್ನು ಕೂಡಲೇ ಜಾರಿ ಮಾಡಬೇಕು. ರಾಜಕೀಯ ಕ್ಷೇತ್ರದಲ್ಲೂ ಒಳಮೀಸಲಾತಿ ತಲುಪಿಸಬೇಕು. ರಾಜಕೀಯ ಮೀಸಲಾತಿಯನ್ನು ಲೋಕಸಭೆ, ವಿಧಾನಸಭೆಗಳಲ್ಲಿ ಹಿಂದುಳಿದ ಜಾತಿಗಳಿಗೆ, ಅಲ್ಪಸಂಖ್ಯಾತರಿಗೆ ಅವಕಾಶ ಕಲ್ಪಿಸಬೇಕಿದೆ ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಗತಿ ಪರ ಅನಂತ ನಾಯ್ಕ್, ವೆಂಕಟರಾಮಯ್ಯ, ಬಾಲರಾಜ ಅರಬರ, ನಾಗರಾಜ ಗೋಕಾವಿ, ಕಡ್ಲಿ ರಾಜಗೋಪಾಲ್, ಫಕ್ಕೀರಪ್ಪ ಹೆಬಸೂರ, ಆಂಜನೇಯ ಕಟಗಿ ಇದ್ದರು.

## ಸಾಕ್ಷಿ ಸುಭಾಷಿತ

ದೇವರ ನುಡಿಯನ್ನು ನಿಮ್ಮ ಕಿವಿಯಿಂದಲ್ಲ
ಹೃದಯದಿಂದ ಕೇಳಿಸಿಕೊಳ್ಳಿ
–ಸುಭಾಷಿತ

## ಸಂಪಾದಕೀಯ

# ಉಪಮುಖ್ಯಮಂತ್ರಿ ಹುದ್ದೆ ಚರ್ಚೆ ಸುತ್ತಮುತ್ತ

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಡಿಸಿಎಂ ಹುದ್ದೆಗಾಗಿ ಚರ್ಚೆಗಳು ನಡೆಯುತ್ತಲೇ ಇವೆ. ಅನೇಕ ಏಳುಬೀಳುಗಳ ಮಧ್ಯೆಯೂ ಸರ್ಕಾರ ಗ್ಯಾರಂಟಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ರಾಜ್ಯದ ಜನಮನವನ್ನ ಗ್ಯಾರಂಟಿ ಕಾರ್ಯಕ್ರಮಗಳು ತಲುಪಿವೆ.

ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಜನಾದೇಶ ಸಿಕ್ಕಿದೆ. ಹಲವು ಹಿರಿಯ ಕಿರಿಯ ನಾಯಕರಿಗೆ ಮಂತ್ರಿ ಸ್ಥಾನವು ಸಿಕ್ಕಿದೆ. ಸಂಪುಟವನ್ನು ಒಂದೇ ಬಾರಿಗೆ ರಚಿಸುವ ಮೂಲಕ ಹಿಂದಿನ ಸರ್ಕಾರದಲ್ಲಿದ್ದ ಸಂಪುಟ ಪುನರ್ ರಚನೆ ಪ್ರಹಸನ ಮರುಕಳಿಸದಂತೆ ಕಾಂಗ್ರೆಸ್ ನೋಡಿಕೊಂಡಿದೆ.

ಆದರೂ ಕಾಂಗ್ರೆಸ್ ನಲ್ಲಿ ಡಿಸಿಎಂ ಹುದ್ದೆ ರಚನೆ ಕುರಿತು ಆಗಾಗ ಚರ್ಚೆಗಳು, ವದಂತಿಗಳು ಹರಿದಾಡುತ್ತಲೇ ಇವೆ.

ಸದ್ಯ ಲೋಕಸಭೆ ಚುನಾವಣೆ ಹತ್ತಿರವಾಗಿರುವುದರಿಂದ ರಾಜ್ಯ ಕಾಂಗ್ರೆಸ್ ಲೋಕಸಭೆ ಚುನಾವಣೆಯ ಬಿಟ್ಟು ಡಿಸಿಎಂ ಹುದ್ದೆಯತ್ತ ಗಮನ ಹರಿಸಿದೆ. ಜಾತಿವಾರು, ಪ್ರಾಂತ್ಯವಾರು ಡಿಸಿಎಂ ಹುದ್ದೆ ರಚನೆ ಆಗಬೇಕು ಎನ್ನುವ ಕುರಿತು ಚರ್ಚೆಗಳು ರಾಜ್ಯದ ಗಮನ ಸೆಳೆಯುತ್ತಿವೆ.

ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಯಾರಾಗಬೇಕು ಎನ್ನುವ ಚರ್ಚೆಗಳು ನಡೆಯಬೇಕಾದ ಹೊತ್ತಿನಲ್ಲಿ, ಯಾರಿಗೆ ಡಿಸಿಎಂ ಹುದ್ದೆ ಸಿಗಬೇಕು ಎನ್ನುವ ಚರ್ಚೆ ಲೋಕಸಭೆ ಚುನಾವಣೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ.

ಡಿಸಿಎಂ ಹುದ್ದೆಗೆ ಯಾವುದೇ ಸಾಂವಿಧಾನಿಕ ಮಾನ್ಯತೆ ಇಲ್ಲ ಎನ್ನುವುದು ಗೊತ್ತಿದ್ದರೂ ಹಲವು ನಾಯಕರು ಡಿಸಿಎಂ ಹುದ್ದೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹರಿಯ ಬಿಡುವ ಮೂಲಕ ಮಾತ್ರ ಪಕ್ಷಕ್ಕೆ ಮುಜುಗರ ಉಂಟುಮಾಡುವ ಸನ್ನಿವೇಶವನ್ನು ಸೃಷ್ಟಿಸುತ್ತಿದ್ದಾರೆ.

ಜೊತೆಗೆ ಪಕ್ಷದ ರಾಜ್ಯಾಧ್ಯಕ್ಷರ ವರ್ಚಸ್ಸನ್ನ ಆ ಮೂಲಕ ಕಡಿಮೆ ಮಾಡುವ ಕೆಲಸಕ್ಕೆ ಮುಂದಾಗಿದ್ದಾರೆ. ಆದರೆ ಎಲ್ಲ ಚರ್ಚೆಗಳಿಗೆ ಪೂರ್ಣ ವಿರಾಮ ಹಾಕುವ ಸಂಕಲ್ಪದೊಂದಿಗೆ ಡಿಕೆ ಶಿವಕುಮಾರ್ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ. ಡಿಸಿಎಂ ರಚನೆಯ ಚರ್ಚೆ ಹೈಕಮಾಂಡ್ ಮಟ್ಟದಲ್ಲಿ ನಡೆದರೆ ತಾವು ಆ ಸ್ಥಾನದಲ್ಲಿ ಮುಂದುವರೆಯುವುದಿಲ್ಲ ಎನ್ನುವ ಡಿಕೆ ಶಿವಕುಮಾರ್ ಮಾತು, ಕೈ ಹೈಕಮಾಂಡ್ ಮಟ್ಟದಲ್ಲಿ ದೊಡ್ಡ ಸಂಚಲನವನ್ನೇ ಸೃಷ್ಟಿಸಿದೆ.

ರಾಜ್ಯಾಧ್ಯಕ್ಷರ ಈ ದಿಟ್ಟ ಹೇಳಿಕೆ ಮತ್ತು ನಡೆಯ ಮಧ್ಯೆಯು ಆಗಾಗ ಡಿಸಿಎಂ ಚರ್ಚೆ ಮುನ್ನಲೆಗೆ ಬರುತ್ತಿದೆ. ಕಾಂಗ್ರೆಸ್ ಇಂತಹ ಒಳ ಜಗಳಗಳಿಂದಲೇ ಹೀನಾಯ ಸ್ಥಿತಿಗೆ ತಲುಪಿದೆ. ಈ ಪ್ರವೃತ್ತಿ ಮುಂದುವರೆದರೆ ಕೈ ಪ್ರಭಾವ ಮತ್ತಷ್ಟು ಕುಗ್ಗುವುದು ನಿಶ್ಚಿತ.

## ಜ.13ರಿಂದ 21ರವರೆಗೆ ಸೊರಟೂರಿನ ಶಾಂತಿನಾಥ ದಿಗಂಬರ ಜೈನ ಮಂದಿರದಲ್ಲಿ ಕಾರ್ಯಕ್ರಮ

# ಶ್ರೀ ಸಿದ್ಧಚಕ್ರ ಮಹಾಮಂಡಲ ವಿಧಾನ ಮಹೋತ್ಸವ

■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಸೊರಟೂರ ಗ್ರಾಮದ ಭಗವಾನ್ ಶ್ರೀ 1008 ಶಾಂತಿನಾಥ ದಿಗಂಬರ ಜೈನ ಮಂದಿರದಲ್ಲಿ ಜ.13ರಿಂದ 21ರವರೆಗೆ ಬೃಹತ್ ಶ್ರೀ ಸಿದ್ಧಚಕ್ರ ಮಹಾಮಂಡಲ ವಿಧಾನ ಮಹೋತ್ಸವವು ಪೂಜ್ಯ ಆಚಾರ್ಯ ವಿದ್ಯಾಸಾಗರ ಮಹಾರಾಜರ ಆಶೀರ್ವಾದದಿಂದ ಪೂಜ್ಯ ಮುನಿಶ್ರೀ ಪಾಯಸಾಗರ ಮಹಾರಾಜರ ಮಾರ್ಗದರ್ಶನದಲ್ಲಿ ನಡೆಯಲಿದೆ.

ಜ.13ರಂದು ಬೆಳಿಗ್ಗೆ 5.45 ಗಂಟೆಗೆ ಜನೇಂದ್ರ ಭಗವಂತರ ಅಭಿಷೇಕ, ಶಾಂತಿದಾರಾ ಪೂಜನ, ಮುಂಜಾನೆ 8.15 ಗಂಟೆಗೆ ಧ್ವಜಾರೋಹಣ, 9 ಗಂಟೆಗೆ ಘಟಯಾತ್ರೆ ಮಂಗಲ ಕಳಸ ತರುವದು, ಮಂಟಪ ಉದ್ಘಾಟನೆ, ಮುಂಜಾನೆ 9.30 ಗಂಟೆಗೆ ಧಾರ್ಮಿಕ ಕಾರ್ಯಕ್ರಮ, ಮುನಿಶ್ರೀ ಅವರಿಂದ ಪ್ರವಚನ ಜರುಗುವದು.

ಜ. 14ರಿಂದ 20ರವರೆಗೆ ಪ್ರತಿದಿನ ಬೆಳಿಗ್ಗೆ 5.45 ಗಂಟೆಗೆ ಮಂಗಳಾಷ್ಟಕ, ಶ್ರೀ ಜನೇಂದ್ರ ಭಗವಂತರ ಅಭಿಷೇಕ, ಶಾಂತಿದಾರಾ, ಸಿದ್ಧಚಕ್ರ ಮಹಾಮಂಡಲ ಆರಾಧನೆ ನಡೆಯಲಿದೆ. ಜ. 21ರಂದು ಬೆಳಿಗ್ಗೆ 5.45 ಗಂಟೆಗೆ ಮಂಗಳಾಷ್ಟಕ, ಶ್ರೀ ಜನೇಂದ್ರ ಭಗವಂತರ ಅಭಿಷೇಕ, ಶಾಂತಿದಾರಾ, ಸಿದ್ಧಚಕ್ರ ಮಹಾಮಂಡಲ ಆರಾಧನೆ, ಮಂಡಲ ವಿಸರ್ಜನೆ, ಮಧ್ಯಾಹ್ನ 1 ಗಂಟೆಗೆ ಭವ್ಯ ಮೆರವಣಿಗೆ, ನಂತರ ಶ್ರೀ ಜನೇಂದ್ರ ಭಗವಂತರ ಅಭಿಷೇಕ ಮುಕ್ತಾಯ ಸಮಾರಂಭ ನಡೆಯಲಿದೆ.

ಪ್ರತಿ ದಿನ ಮುಂಜಾನೆ 9.30 ಗಂಟೆಗೆ ಮುನಿಶ್ರೀ ಅವರಿಂದ ಪ್ರವಚನ, ಪ್ರತಿ ದಿನ ಸಂಜೆ 6 ಗಂಟೆಗೆ ಸಂಗೀತ, ಸಾಂಸ್ಕೃತಿಕ ಹಾಗೂ ಆರತಿ ಕಾರ್ಯಕ್ರಮ ನಡೆಯುವದು.

ಲಕ್ಷ್ಮೀ ವೆಂಕಟೇಶ ವಜ್ರಂಗಿ ದಂಪತಿಗಳು ಮಹೋತ್ಸವದ ಧ್ವಜಾರೋಹಣ ನೆರವೇರಿಸುವರು. ಮೈನಾರಾಣಿ ಭರಮಗೌಡ ಪಾಟೀಲ ದಂಪತಿಗಳು ಮಂಟಪ ಉದ್ಘಾಟಿಸುವರು. ಬೆಳಗಾವಿಯ ನಮಿತಾ ರಾಜು ಪರಮಜ್ ಅವರಿಂದ ಭಕ್ತಿ ಸಂಗೀತವಿದೆ. ಲಕ್ಷ್ಮೇಶ್ವರದ ದಿಗಂಬರ ಜೈನ್ ಸಮಾಜ, ಚಂಪಾವತಿ ಚಂದ್ರಪ್ಪ ಹೊಸೂರ ಮಹೋತ್ಸವಕ್ಕೆ ವಿಶೇಷ ಸಹಕಾರ ನೀಡಿದ್ದಾರೆ.

ಸುರೇಶ ಮಲ್ಲಾಡದ, ಪ್ರಕಾಶ ಮುತ್ತಿನ, ಶಿವಪ್ಪ




ಹೋಳಗಿ, ಅನಂತಪ್ಪ ಹೋಳಗಿ, ಧರ್ಮಣ್ಣ ಹೊಸೂರ, ಯಲ್ಲಪ್ಪ ಮಲ್ಲಾಡದ, ಪಾರ್ಶ್ವನಾಥ ಮಲ್ಲಾಡದ, ವರ್ಧಮಾನ ಜೈನರ, ಮಂಜಕ್ಕ ಭಬ್ಬಿ, ಸುರೇಶ ಜಲ್ಲಿ, ಸುನೀಲ ಒಂಟಿ ಸೇರಿದಂತೆ ಸೊರಟೂರಿನ ಸಮಸ್ತ ಜೈನಧರ್ಮ ಬಂಧುಗಳು ಮಹೋತ್ಸವದ ಯಶಸ್ವಿಗೆ ಕಂಕಣಬದ್ಧರಾಗಿ ಕಾರ್ಯನಿರ್ವಹಿಸುತ್ತಿದ್ದು, ಸಮಾಜ ಬಾಂಧವರು ಈ ಧಾರ್ಮಿಕ ಮಹೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಗದಗ ಜಿಲ್ಲಾ ದಿಗಂಬರ ಜೈನ್ ಸಮಾಜದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಮುತ್ತಿನ ಮನವಿ ಮಾಡಿಕೊಂಡಿದ್ದಾರೆ.

ದಿಗಂಬರ ಜೈನ್ ಧರ್ಮದ ಶಿಷ್ಟಾಚಾರದ ಪ್ರಕಾರ ಸಮಾರಂಭದ ಸೌಧರ್ಮ ಇಂದ್ರ ಇಂದ್ರಾಣಿಯರಾಗಿ ತಾವರಗೇರಿಯ ನೇತ್ರಾ ಸುರೇಶ ಜೂಜಿನ ದಂಪತಿಗಳು, ಮೈನಾ ಸುಂದರಿಯಾಗಿ ರೂಪಾ ಭರತೇಶ ಮಲ್ಲಾಡದ ದಂಪತಿಗಳು, ಸನ್ನತ್‌ಕುಮಾರ ಇಂದ್ರ ಇಂದ್ರಾಣಿಯರಾಗಿ ಪ್ರೇಮಾ ಯಲ್ಲಪ್ಪ ಅಪ್ಪಣ್ಣವರ ದಂಪತಿಗಳು, ಧನಪತಿ ಕುಬೇರರಾಗಿ ಪದ್ಮವ್ವ ದೇವಪ್ಪ ಬೆಂತೂರ ದಂಪತಿಗಳು, ಈಶಾನ್ಯ ಇಂದ್ರ ಇಂದ್ರಾಣಿಯರಾಗಿ ಭಾವನಾ ಶಂಕ್ರಪ್ಪ ಜಲ್ಲಿ ದಂಪತಿಗಳು, ಅಚ್ಯುತ್ ಇಂದ್ರ ಇಂದ್ರಾಣಿಯರಾಗಿ ಮಂಜುಳಾ ಪರಶುರಾಮ ಒಂಟಿ ದಂಪತಿಗಳು ಆಗಮಿಸುವರು.

## ಬಿವಿವಿ ವೇದಿಕೆಯ ಮೇಲೆ ಹೆಜ್ಜೆ ಹಾಕಿದ ಡಾ. ಮಾತಾ ಮಂಜಮ್ಮ ಜೋಗತಿ

# ಎಲ್ಲ ದಾನಕ್ಕಿಂತ ವಿದ್ಯಾದಾನ ಶ್ರೇಷ್ಠ

■ವಿಜಯಸಾಕ್ಷಿ ಸುದ್ದಿ, ಗದಗ

ಹಾಲಿಗೆ ಬೆಂಕಿಯೆಂಬ ಸಂಸ್ಕಾರ ನೀಡಿದಾಗ ಕೆನೆಯಾಗಿ, ಮೊಸರಾಗಿ, ಬೆಣ್ಣೆಯಾಗಿ, ಕೊನೆಗೆ ದೇವರ ದೀಪಕ್ಕೆ ತುಪ್ಪವಾಗಿ, ಎಲ್ಲರ ಊಟಕ್ಕೆ ಬೇಕಾಗುವ ತುಪ್ಪವಾಗುತ್ತದೆ. ಅದೇ ರೀತಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದರೆ ಸಮಾಜದಲ್ಲಿ ಒಬ್ಬ ಆದರ್ಶ ವ್ಯಕ್ತಿಯಾಗಿ ಹೊರ ಹೊಮ್ಮುತ್ತಾರೆ. ಎಲ್ಲ ದಾನಕ್ಕಿಂತ ವಿದ್ಯಾದಾನ ಶ್ರೇಷ್ಠವಾದದ್ದು. ಮಕ್ಕಳು ವಿದ್ಯೆಯ ಜೊತೆಗೆ ಗುರುಗಳಿಗೆ, ತಂದೆ–ತಾಯಿಗಳಿಗೆ ಗೌರವ ನೀಡುವ ಸಂಸ್ಕಾರವನ್ನು ಕಲಿಯಬೇಕು. ಮಕ್ಕಳ ಆಸೆ, ಅಭಿರುಚಿ, ಆಸಕ್ತಿಗೆ ತಕ್ಕಂತೆ ವಿದ್ಯೆಯನ್ನು ಕಲ್ಪಿಸಿಕೊಡಬೇಕು ಎಂದು ಡಾ. ಮಾತಾ ಮಂಜಮ್ಮ ಜೋಗತಿ ಅಭಿಪ್ರಾಯಪಟ್ಟರು.

ಅವರು ಇತ್ತೀಚೆಗೆ ನಗರದ ಬಾಲ ವಿನಾಯಕ ವಿದ್ಯಾನಿಕೇತನ ಶಾಲೆಯ 38ನೇ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

2022–2023ರ ಶೈಕ್ಷಣಿಕ ಸಾಲಿನ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ಶಾಲೆಯ ಕ್ರೀಡಾ ವೀರಾಗ್ರಣಿ ವಿಜೇತರಿಗೆ, ಶೈಕ್ಷಣಿಕ ಸಾಧನೆ, ಶಿಸ್ತಿನ ತರಗತಿ ಸೇರಿ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು.

ತೃಪ್ತಿ ಜೋಶಿ ಮತ್ತು ಸಂಗಡಿಗರು ಪ್ರಾರ್ಥನಾಗೀತೆ ಹಾಡಿದರು. ಸಾಕ್ಷಿ ಮರಿಗೌಡ ಮತ್ತು ಸಂಗಡಿಗರು ಸ್ವಾಗತ ನೃತ್ಯ ಪ್ರದರ್ಶಿಸಿದರು. ನಿರಜ್ ಕೌಜಲಗಿ, ನಂದಿನಿ ಮಲ್ಲಪ್ಪನವರ ಅತಿಥಿಗಳನ್ನು ಪರಿಚಯಿಸಿದರು. ಶ್ರೇಯಾ ಪಾಸ್ತೆ ಪುಷ್ಪಾರ್ಪಣೆ ನಡೆಸಿಕೊಟ್ಟರು. ಪ್ರಾಚಾರ್ಯ ವಿ.ಎಮ್. ಅಡ್ನೂರ್ ಶಾಲೆಯ ವಾರ್ಷಿಕ ವರದಿ ವಾಚಿಸಿದರು.



ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಎಸ್.ರವಿ, ನಿರ್ದೇಶಕರಾದ ಆರ್.ವಿನಾಯಕ್, ಇ.ಎಲ್.ಸಿ. ಮುಖ್ಯಸ್ಥರಾದ ಮಲ್ಲಿಕಾ ರವಿ, ಪ್ಲೇ ಹೋಮ್‌ನ ಮುಖ್ಯಸ್ಥರಾದ ಗಂಗಾ, ಆಡಳಿತ ಮಂಡಳಿ ಸದಸ್ಯರಾದ ಎಂ.ಆರ್. ಪಾಟಿಲ್, ಪ್ರಾಚಾರ್ಯ ವಿ.ಎಂ ಅಡ್ನೂರ್, ಉಪ ಪ್ರಾಚಾರ್ಯ ಪಿ.ಜಿ. ಬ್ಯಾಳಿ, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆಮನಾ ಮುಲ್ಲಾ ಶಾಲಾ ವಾರ್ಷಿಕ ಪುಸ್ತಕ 'ಶುಭಂ' ಬಿಡುಗಡೆ ಕಾರ್ಯಕ್ರಮ ನಡೆಸಿಕೊಟ್ಟರು.

ತುಷಾರ್ ಅಬ್ಬಿಗೇರಿ, ಐಶ್ವರ್ಯ ಹರ್ಲಾಪೂರ, ಕೆಯೂರ್ ವಾರಕರ್, ನಿವೇದಿತಾ ಹೊನ್ನಪ್ಪನವರ, ಶ್ರೇಯಾ ಯಮಗೌಳಿ, ಪ್ರಿಯಾಂಕ ಶಾನುಭೋಗರ್, ಮುರಳಿಕೃಷ್ಣ ಪಾಟೀಲ್, ಸ್ಫೂರ್ತಿ ಯಾದವಾಡ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಕಬೀರ್ ನದಾಫ್, ಅನುಷಾ ಕೋರಿಮಠ್, ಶ್ರವಂತ್ ಮೂಲಿಮನಿ, ಅರ್ಪಿತಾ ದ್ಯಾಂಪೂರ್ ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಿರೂಪಿಸಿದರು. ಬಾಲಾಜಿ ಪಾನಗಟ್ಟಿ, ಪಾಲ್ಗುಣಿ ವಾರಕರ್ ನಿರೂಪಿಸಿದರು. ಶ್ರೇಯಾ ಮುನವಳ್ಳಿ ಸ್ವಾಗತಿಸಿದರು. ಮನಸ್ವಿ ಕಲಾಲ್ ವಂದಿಸಿದರು.

# 'ವ್ಯೂಹ' ಚಿತ್ರದ 'ಮುದ್ದಾದ ಮಾಯೆ' ಹಾಡು ಬಿಡುಗಡೆ



■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ಎಸ್.ಡಿ. ಫಿಲಂಸ್ ಮತ್ತು ಮೂರು ಬಿಟ್ಟವರು ಎಂಟರ್ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ಅಪ್ಪಟ ಉತ್ತರ ಕರ್ನಾಟಕದ ಪ್ರತಿಭೆಗಳೇ ಸೇರಿ ಮಾಡಿರುವ 'ವ್ಯೂಹ' ಕನ್ನಡ ಚಲನಚಿತ್ರದ 'ಮುದ್ದಾದ ಮಾಯೇ ನಿನ್ನ ನಗು...' ಹಾಡನ್ನು ಯ್ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆ ಮಾಡಲಾಯಿತು.

ಬೆಳಗಾವಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಪ್ರಮುಖ ಪಾತ್ರದಲ್ಲಿ ಸೂರಜ್ ದೇಸಾಯಿ, ಪ್ರವೀಣ ಸುತಾರ, ದೀಪಶ್ರೀ ಗೌಡ, ಮಾನಸಿ ಶಿವನಗೇಕರ್, ಮಹೇಶ ಪಾಟೀಲ್, ಅಭಿಜಿತ ದೇಶಪಾಂಡೆ, ಶಾಂತಾ ಆಚಾರ್ಯ, ಕಿರಣ್ ಮುಂತಾದವರು ಅಭಿನಯಿಸಿದ್ದಾರೆ.

ವಿಶ್ವಾರಾಧ್ಯ ಕೋಟಿ ಛಾಯಾಗ್ರಹಣವಿದ್ದು, ಚಿತ್ರದ ಒನ್‌ಲೈನ್ ಕಥೆಯನ್ನು ಸೂರಜ್ ದೇಸಾಯಿ ಬರೆದಿದ್ದಾರೆ. ಚಿತ್ರಕಥೆ, ಸಂಭಾಷಣೆಯನ್ನು, ಪ್ರವೀಣ ಸುತಾರ, ಮಹೇಶ ಪಾಟೀಲ, ಅಭಿಷೇಕ್ ದೇಸಾಯಿ ಬರೆದಿದ್ದಾರೆ. ಫ್ರಾಂಕ್ಲೀನ್ ರಾಕಿ ಸಂಗಿತ ನಿರ್ದೇಶನ, ಪ್ರಶಾಂತ ಶೇಬನ್ನವರ ಸಂಕಲನ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರ ಪತ್ರಿಕಾ ಸಂಪರ್ಕ ಚಿತ್ರಕ್ಕೆ ಇದೆ.

# ಪಂ. ಗವಾಯಿಗಳಿಗೆ ಮರಣೋತ್ತರ 'ಭಾರತ ರತ್ನ' ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಡಾ. ಪಂ. ಪುಟ್ಟರಾಜ ಸೇವಾ ಸಂಘದ ವತಿಯಿಂದ ಬೀದರ್ ನಗರದಲ್ಲಿ ಕೇಂದ್ರ ಸಚಿವ ಭಗವಂತ ಖೂಬಾ ಅವರನ್ನು ಭೇಟಿ ಮಾಡಿ, ಪಂ. ಪುಟ್ಟರಾಜ ಗುರುಗಳಿಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ಹಾಗೂ ಗದಗ ನಗರದಲ್ಲಿ ನವೀಕರಣಗೊಳ್ಳುತ್ತಿರುವ ರೇಲ್ವೆ ನಿಲ್ದಾಣಕ್ಕೆ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳ ಹೆಸರು ನಾಮಕರಣ ಮಾಡಬೇಕೆಂದು ಮನವಿ ಮಾಡಿದರು.



ಈ ಸಂಧರ್ಭದಲ್ಲಿ ಸೇವಾ ಸಂಘದ ಅಧ್ಯಕ್ಷ ಶ್ರೀಕಂಠಯ್ಯ ಸ್ವಾಮಿ, ಸಂಘದ ಸದ್ಯಸರಾದ ಭದ್ರೇಶ್ವರ ಮಠದ, ಶಿವಕುಮಾರ ಸ್ವಾಮಿ, ವಿಶಾಲ್ ಪಾಂಪಡೆ ಇದ್ದರು.

## ಗದಗ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮದಲ್ಲಿ ವಿ.ಪ ಸದಸ್ಯ ಎಸ್.ವಿ. ಸಂಕನೂರ

# ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳಲ್ಲಿ ಸುಪ್ತವಾದ ಪ್ರತಿಭೆಯನ್ನು ಹೊರತರುವ ಹಾಗೂ ವಿದ್ಯಾರ್ಥಿಗಳ ಕಲಿಕೆಗೆ ಹೊಸದಾದ ಕೌಶಲ್ಯವನ್ನು ರೂಢಿಸಿಕೊಳ್ಳಲು ವೇದಿಕೆಯಾಗಿ ಜಿಲ್ಲಾ ಮಕ್ಕಳ ಪ್ರತಿಭಾ ಕಾರಂಜಿ ಸ್ಪರ್ದೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅಭಿಪ್ರಾಯಪಟ್ಟರು.

ನಗರದ ಲೊಯೊಲಾ ಪ್ರಾಥಮಿಕ/ಪ್ರೌಢಶಾಲೆಯಲ್ಲಿ ನಡೆದ ಗದಗ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೇದಿಕೆಯ ಮೇಲೆ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ.ಎಂ., ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ, ಪ್ರತಿಭಾ ಕಾರಂಜಿ ನೋಡಲ್ ಅಧಿಕಾರಿ ಎಂ.ಎ. ಮಾಡಲಗೇರಿ, ಮುಂಡರಗಿ ಬಿಇಓ ಎಚ್.ಎಂ. ಫಡ್ನೀಸ್, ಗದಗ ಗ್ರಾಮೀಣ ಬಿಇಓ ಜಿ.ಎಂ. ಮುಂದಿನಮನಿ, ಎಸ್.ಡಿ. ಕನವಳ್ಳಿ, ಶಿಕ್ಷಣಾಧಿಕಾರಿ (ಅಕ್ಷರ ದಾಸೋಹ) ಕೊಟ್ರೇಶ ವಿಭೂತಿ, ಡಯಟ್ ಉಪನ್ಯಾಸಕ ಎಚ್.ಬಿ. ರಡ್ಡೇರ, ಜಿ.ಡಿ. ದಾಸರ, ಜೆ.ಎ. ಬಾವಿಕಟ್ಟಿ, ಎಚ್.ಎ. ಫಾರೂಖಿ, ಜಿಲ್ಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಪಿ.ಎಚ್. ಕಡಿವಾಲ, ಕ.ರಾ.ಪ್ರಾ.ಶಾ. ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವಿ.ಎಂ. ಹಿರೇಮಠ, ರಾ.ಸ.ನೌ.ಸಂಘದ ಕೆ.ಬಿ. ಕೊಣ್ಣೂರ, ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಕೆ. ಲಮಾಣಿ, ಎಂ.ಎಸ್. ಕುಚಬಾಳ, ಬಿ.ಎಫ್. ಪೂಜಾರ, ಎಸ್.ಆರ್. ಬಂಡಿ, ಬಿ.ಕೆ. ನಿಂಬನಗೌಡರ, ರವಿ ಕೊಟಿಯವರ, ಆರ್.ಎಂ. ಶಿರಹಟ್ಟಿ, ಮಹೇಶ ಕುರಿ, ಮುಖ್ಯಾಧ್ಯಾಪಕಿ ಸಿಸ್ಟರ್ ರೆನಿಟಾ ಪಿಂಟೊ, ಸಿಸ್ಟರ್ ಬೆನಿಗ್ನಾ ಹಾಗೂ ವಿವಿಧ ಶಿಕ್ಷಕರ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಪಿ.ಎಚ್. ಕಡಿವಾಲ, ಕ.ರಾ.ಪ್ರಾ.ಶಾ.ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವಿ.ಎಂ. ಹಿರೇಮಠ ಸಾಂದರ್ಭಿಕವಾಗಿ ಮಾತನಾಡಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವಾನಂದ ಗಿಡ್ನಂದಿ ಕಾರ್ಯಕ್ರಮ ನಿರೂಪಿಸಿಸಿದರು. ಎಂ.ಎ. ಮಾಡಲಗೇರಿ ವಂದಿಸಿದರು.



ಪ್ರತಿ ವರ್ಷ ಇಲಾಖೆಯ ಯೋಜನಾ ಕಾರ್ಯಕ್ರಮದಡಿಯಲ್ಲಿ ಯೋಜಿಸಲಾದ ವಯಕ್ತಿಕ ಹಾಗೂ ಸಾಮೂಹಿಕ ಸ್ಪರ್ಧೆಗಳಲ್ಲಿ ಕಂಠಪಾಠ, ಧಾರ್ಮಿಕ ಪಠಣ, ಸಂಗೀತ, ಕಥೆ ಹೇಳುವುದು ಹೀಗೆ ಹತ್ತು ಹಲವಾರು ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಏಕೈಕ ವೇದಿಕೆ ಪ್ರತಿಭಾ ಕಾರಂಜಿಯಾಗಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆಯಬೇಕೆಂದು ಎಸ್.ವಿ. ಸಂಕನೂರ ಕರೆ ನೀಡಿದರು.

# ಅವಹೇಳನಕಾರಿ ಹೇಳಿಕೆಗೆ ಖಂಡನೆ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಲಿಂಗಾಯತ ಪಂಚಮಸಾಲಿ ಪ್ರಥಮ ಜಗದ್ಗುರುಗಳಾದ ಕೂಡಲಸಂಗಮ ಪೀಠ ಜಯಮೃತ್ಯುಂಜಯ ಸ್ವಾಮಿಗಳಿಗೆ ಅವಹೇಳನಕಾರಿ ಹೇಳಿಕೆ ನೀಡಿದ ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಅವರ ನಡೆಯನ್ನು ಖಂಡಿಸಿ, ಬಹಿರಂಗವಾಗಿ ಕ್ಷಮೆ ಯಾಚಿಸಬೇಕು ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್‌ನ ಮುಂಡರಗಿ ಶಾಖೆಯ ಪದಾಧಿಕಾರಿಗಳು ಆಗ್ರಹಿಸಿದರು.

ಶಾಖೆಯ ಅಧ್ಯಕ್ಷ ಕೊಟ್ರಗೌಡ ಸಿ.ಪಾಟೀಲ ಮಾತನಾಡಿ, ಮಾಜಿ



ಶಾಸಕ ಎ.ಎಸ್. ಪಾಟೀಲ ನಡಹಳ್ಳಿರವರು ಕೂಡಲಸಂಗಮ ಪೀಠದ ಜಗದ್ಗುರುಗಳಾದ ಜಯಮೃತ್ಯುಂಜಯ ಸ್ವಾಮಿಗಳಿಗೆ ಅವಹೇಳನಕಾರಿ ಮಾತನಾಡಿರುವುದನ್ನು ಖಂಡಿಸುತ್ತೇವೆ ಎಂದರಲ್ಲದೆ, ಎ.ಎಸ್. ಪಾಟೀಲ ನಡಹಳ್ಳಿ ಕೂಡಲೇ ಸ್ವಾಮಿಗಳಲ್ಲಿ ಬಹಿರಂಗವಾಗಿ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶಿವಪ್ಪ ಅಂಕದ, ಮುದಲಿಂಗಪ್ಪ ಕೊರ್ಲಹಳ್ಳಿ, ಬಸವರಾಜ ದೇಸಾಯಿ, ವ್ಹಿ.ಎಸ್. ಗಟ್ಟಿ, ಫಕೀರಪ್ಪ ಉಳ್ಳಾಗಡ್ಡಿ, ಯಲ್ಲಪ್ಪ ಹೊಂಬಳಗಟ್ಟಿ ಉಪಸ್ಥಿತರಿದ್ದರು ಎಂದು ಶಾಖೆಯ ಪ್ರಧಾನ ಕಾರ್ಯದರ್ಶಿ ಬಸವರಾಜ ಯಲ್ಲಪ್ಪ ನವಲಗುಂದ ತಿಳಿಸಿದ್ದಾರೆ.

# ಇಂದು ಐಟಿಐ ಕಟ್ಟಡ ಉದ್ಘಾಟನೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ಶ್ರೀಮತಿ ಪಾರ್ವತಮ್ಮ ಮತ್ತು ಶಂಕ್ರಪ್ಪ ಶಿವಲಿಂಗಪ್ಪ ಮೈಲಾರ ಸ್ಮಾರಕ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹೊಂಬಳದಲ್ಲಿ ನಬಾರ್ಡ್ ಅನುದಾನದಡಿಯಲ್ಲಿ ನೂತನವಾಗಿ ನಿರ್ಮಿಸಿದ ಐ.ಟಿ.ಐ. ಕಟ್ಟಡದ ಉದ್ಘಾಟನಾ ಸಮಾರಂಭವು ಜನವರಿ 10 ರಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ನರಗುಂದ ಶಾಸಕ ಸಿ.ಸಿ.ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಹೊಂಬಳ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಭೀಮಾಂಬಿಕಾ ಜಗದೀಶ ಹಾಲನವರ, ಉಪಾಧ್ಯಕ್ಷೆ ಶ್ರೀಮತಿ ನೀಲವ್ವ ಬಾಳಮ್ಮನವರ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಪರ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಉಮಾಮಹಾದೇವನ, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಶ್ರೀಮತಿ ಸಿ.ಶಿಖಾ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಆಯುಕ್ತರಾದ ಶ್ರೀಮತಿ ಡಾ.ರಾಗಪ್ರಿಯಾ ಆರ್, ಜಿಲ್ಲಾಧಿಕಾರಿ ಶ್ರೀಮತಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ನಿರ್ದೇಶಕ ಡಾ. ನಾಗೇಂದ್ರ ಎಫ್. ಹೊನ್ನಳ್ಳಿ, ಬೆಳಗಾವಿ ವಿಭಾಗೀಯ ಕಚೇರಿ ಜಂಟಿ ನಿರ್ದೇಶಕ ಡಾ. ಬಸವಪ್ರಭು ಹಿರೇಮಠ ವಿಶೇಷ ಆಹ್ವಾನಿತರಾಗಿದ್ದಾರೆ.

ಗ್ರಾಮದ ಭೂ ದಾನಿಗಳಾದ ಶೇಖರಪ್ಪ ಕುಷ್ಟಗಿ, ಶ್ರೀಮತಿ ರೇಣುಕಾ ಕುಷ್ಟಗಿ ಹಾಗೂ ಪ್ರಜ್ವಲ ಶೇಖರಪ್ಪ ಕುಷ್ಟಗಿ ಅವರನ್ನು ಸನ್ಮಾನಿಸಲಾಗುವುದು.

### ಶ್ರೀ ಅನ್ನದಾನೇಶ್ವರ ಪ.ಪೂ ಮಹಾವಿದ್ಯಾಲಯದಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ

# ಸಾಧಿಸುವ ಕಿಚ್ಚಿನೊಂದಿಗೆ ಮುನ್ನುಗ್ಗಿ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮನುಷ್ಯನಿಗೆ ತಲೆಯಲ್ಲಿ ಹುಚ್ಚು, ಎದೆಯಲ್ಲಿ ಕಿಚ್ಚು ಇದ್ದರೆ ಆತ ಜೀವನದಲ್ಲಿ ಏನನ್ನಾದರೂ ಸಾಧಿಸಬಲ್ಲ. ಅದಕ್ಕಾಗಿ ವಿದ್ಯಾರ್ಥಿಗಳಾದ ನೀವು ಈಗಿನಿಂದಲೇ ನೀವೇನಾಗಬೇಕೆಂಬ ಹುಚ್ಚನ್ನು ತಲೆಯಲ್ಲಿ ತುಂಬಿಕೊಂಡು, ಅದನ್ನು ಸಾಧಿಸುವ ಕಿಚ್ಚನ್ನು ಮನಸ್ಸಿನಲ್ಲಿ ಬೆಳೆಸಿಕೊಂಡು ಮುನ್ನಡೆದರೆ ನಿಮ್ಮ ಭವಿಷ್ಯ ಉಜ್ವಲವಾಗುವುದರಲ್ಲಿ ಸಂದೇಹವಿಲ್ಲ ಎಂದು ಧಾರವಾಡದ ಹೂಮನ್ ಮೈಂಡ್‌ಸೆಟ್‌ನ ಮಹೇಶ ಮಾಸಾಳ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಜರುಗಿದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವನೆ ಬೆಳೆಸಿಕೊಳ್ಳಬೇಕು. ಪ್ರಶ್ನಿಸುವುದರಿಂದ ಅನೇಕ ವಿಚಾರಗಳು ತಿಳಿಯುತ್ತವೆ. ಪ್ರಶ್ನಿಸದೆ ಇದ್ದರೆ ಬೇರೆಯವರು ಹೇಳಿದ್ದನ್ನು ಮಾತ್ರ ಕೇಳುವ ಕೀಲುಗೊಂಬೆಯಾಗುತ್ತೀರಿ. ನಿಮ್ಮ ಜೀವನವನ್ನು ಹಾಗೆ ಆಗಲು ಬಿಡದೆ ನಿಮ್ಮ ಸ್ವಂತಿಕೆಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಿ ಎಂದು



ಕಿವಿಮಾತು ಹೇಳಿದರು.

ನಿಮ್ಮಲ್ಲಿನ ಸಾಮರ್ಥ್ಯವನ್ನು ನೀವು ಮೊದಲು ತಿಳಿದುಕೊಳ್ಳಬೇಕು. ನಿಮ್ಮ ಸಾಮರ್ಥ್ಯದ ಬಗ್ಗೆ ನಿಮಗೆ ನಂಬಿಕೆ ಇರಬೇಕು. ನಿಮ್ಮ ಸಾಮರ್ಥ್ಯಕ್ಕೆ ಅನುಕೂಲವಾಗುವಂತೆ ನಿಮ್ಮ ಭವಿಷ್ಯವನ್ನು ನೀವು ರೂಪಿಸಿಕೊಂಡಾಗ ಮಾತ್ರ ನಿಮ್ಮ ಭವಿಷ್ಯಕ್ಕೊಂದು ಅರ್ಥ ಬರುತ್ತದೆ. ಇಲ್ಲವಾದರೆ ಜೀವನದಲ್ಲಿ ನೀವು ಸೋಲನ್ನು ಅನುಭವಿಸುತ್ತೀರಿ. ಹಾಗಾಗದಂತೆ ಎಚ್ಚರ ವಹಿಸಬೇಕಾದುದು ನಿಮ್ಮ ಜವಾಬ್ದಾರಿಯಾಗಿದೆ. ಅಂಕಗಳು ಎಂದಿಗೂ ವ್ಯಕ್ತಿಯನ್ನು ಪರಿಚಯಿಸುವುದಿಲ್ಲ. ಬದಲಾಗಿ ಅವನ ವ್ಯಕ್ತಿತ್ವ ಜಗತ್ತಿಗೆ ಅವನನ್ನು ಪರಿಚಯಿಸುತ್ತದೆ. ಶಿಕ್ಷಣದಲ್ಲಿ ನಪಾಸಾದ ಎಷ್ಟೋ ಜನ ಜೀವನದಲ್ಲಿ ಯಶಸ್ಸು ಕಂಡ ಸಹಸ್ರಾರು ಉದಾಹರಣೆಗಳು ನಿಮ್ಮ ಮುಂದಿವೆ. ಅವುಗಳ ಕಡೆಗೆ ನೀವು ಗಮನ ನೀಡಬೇಕು ಎಂದರು.

ಉಪನ್ಯಾಸಕರಾದ ಎಫ್. ಎನ್. ಹುಡೇದ ಸ್ವಾಗತಿಸಿದರು. ಪ್ರಾಚಾರ್ಯ ವೈ.ಸಿ. ಪಾಟೀಲ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬಿ.ಎಸ್. ಕುಲಕರ್ಣಿ ಅತಿಥಿಗಳನ್ನು ಪರಿಚಯಿಸಿದರು. ಶಿವಾನಂದ ಕುರಿ ವರದಿ ವಾಚಿಸಿದರು. ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು 2022-23ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಆಶೀರ್ವಚನ ನೀಡಿದರು.

ವಿದ್ಯಾರ್ಥಿಗಳಾದ ದೇವಮ್ಮ, ಪೃಥ್ವಿರಾಜ ಮತ್ತು ಉಷಾ ಶ್ಯಾವಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಾಲೇಜು ಸಮಿತಿಯ ಅಧ್ಯಕ್ಷ ಮಹಾಂತೇಶ ಸೋಮನಕಟ್ಟಿ ಅಧ್ಯಕ್ಷತೆ ವಹಿಸಿದ್ದರು

. ವೇದಿಕೆಯ ಮೇಲೆ ಸಂಸ್ಥೆಯ ಪ್ರಧನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಆಡಳಿತಾಧಿಕಾರಿ ಎನ್.ಆರ್. ಗೌಡರ, ಸದಸ್ಯರಾದ ಬಸವರಾಜ ಕಳಕೊಣ್ಣವರ, ಎಂ.ಪಿ. ಪಾಟೀಲ ಮತ್ತಿತರರಿದ್ದರು. ವಿದ್ಯಾರ್ಥಿನಿ ಹುಲಿಗೆಮ್ಮ ಮಾಲಗಿತ್ತಿ, ಆಫ್ರೀನ್ ಶೇಖ್ ಮತ್ತು ಪೂರ್ವಿಕಾ ರೊಟ್ಟಿ ನಿರೂಪಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಪದವಿಪೂರ್ವ ಉಪನಿರ್ದೇಶಕ ಡಾ. ಕೃಷ್ಣಪ್ಪ.ಪಿ ಮಾತನಾಡಿ, ಎಲ್ಲ ದಾನಗಳಲ್ಲಿ ವಿದ್ಯಾದಾನ ಅತ್ಯಂತ ಶ್ರೇಷ್ಠವಾದದ್ದು. ಒಮ್ಮೆ ಈ ದಾನವನ್ನು ಪಡೆದ ವ್ಯಕ್ತಿ ಜೀವನದುದ್ದಕ್ಕೂ ಸಂತೋಷ ಮತ್ತು ನೆಮ್ಮದಿಯಿಂದ ಇರುತ್ತಾನೆ. ಅಂತಹ ಶ್ರೇಷ್ಠ ಶಿಕ್ಷಣ ನೀಡುವ ಅನೇಕ ಸಂಸ್ಥೆಗಳಲ್ಲಿ ಶ್ರೀ ಅನ್ನದಾನೇಶ್ವರ ಸಂಸ್ಥೆಯೂ ಮಹತ್ವ ಪಡೆದಿದೆ. ನಿಮ್ಮೊಳಗಿನ ಪ್ರತಿಭೆಯನ್ನು ಸ್ವತಃ ನೀವೇ ಗುರುತಿಸಿಕೊಂಡು ನಿಮ್ಮ ವ್ಯಕ್ತಿತ್ವವನ್ನು ವಿಕಸನ ಮಾಡಿಕೊಳ್ಳಿ ಎಂದರು.

## ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ನಿಮಿತ್ತ ಪೂರ್ವಭಾವಿ ಸಭೆ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಜನವರಿ 15 ರಂದು ಆಚರಿಸಲಾಗುವ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ನಿಮಿತ್ತ ಜನವರಿ 10 ರಂದು ಬುಧವಾರ ಸಂಜೆ 5 ಗಂಟೆಗೆ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸಭೆಗೆ ಹಾಜರಾಗಿ ಸಲಹೆ/ ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀರಾಮ ಮಹಾಮಂತ್ರ ಎಲ್ಲೆಡೆ ಮೊಳಗಲಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪ್ರಭು ಶ್ರೀರಾಮನ ಜನ್ಮಸ್ಥಾನ ಅಯೋಧ್ಯೆಯಲ್ಲಿ ನಿರ್ಮಾಣಗೊಂಡ ಶ್ರೀರಾಮ ಮಂದಿರದಲ್ಲಿ ಜ.22ರಂದು ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ದೇಶಾದ್ಯಂತ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳೋಣ ಎಂದು ಶಾಸಕ ಡಾ. ಚಂದ್ರು ಲಮಾಣಿ ಮನವಿ ಮಾಡಿದರು.

ಅವರು ಪಟ್ಟಣದ ಆರಾಧ್ಯ ದೈವ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ತಾಲೂಕಿನ ಪ್ರತಿ ಮನೆಗೂ ಶ್ರೀರಾಮನ ಭಾವಚಿತ್ರ, ಕಾರ್ಯಕ್ರಮದ ನಿವೇದನೆ ಪತ್ರ ಮತ್ತು ಮಂತ್ರಾಕ್ಷತೆ ತಲುಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಜ.7ರಿಂದ 15ರವರೆಗೆ ಕ್ಷೇತ್ರದ ಎಲ್ಲ ಶ್ರೀರಾಮನ ಭಕ್ತಾದಿಗಳಿಗೆ



ಶ್ರೀರಾಮನ ಭಾವಚಿತ್ರ ಮತ್ತು ಕರಪತ್ರ, ಮಂತ್ರಾಕ್ಷತೆಯನ್ನು ಮನೆ ಮನೆಗೆ ತಲುಪಿಸುವ ಕಾರ್ಯ ನಡೆಯಲಿದೆ. ದೇಶದ ಅಸಂಖ್ಯಾತ ಶ್ರೀರಾಮನ ಭಕ್ತರಲ್ಲಿ ಸಂಭ್ರಮ, ಪುಳಕವನ್ನುಂಟುಮಾಡಿದೆ. ಅಂದು ನಮ್ಮ ಸುತ್ತಮುತ್ತಲಿನ ಎಲ್ಲ ದೇವಸ್ಥಾನಗಳಲ್ಲಿ ಪೂಜೆ, ಶ್ರೀರಾಮ ಮಹಾಮಂತ್ರ ಮೊಳಗುವಂತಾಗಲಿ. ಸಂಜೆ ಮನೆಗಳ ಮುಂದೆ ದೀಪಗಳನ್ನು ಬೆಳಗಿಸಬೇಕು. ಈ ಮಹೋನ್ನತ ಕಾರ್ಯದಲ್ಲಿ ಹಿಂದೂಪರ ಸಂಘಟನೆಯ ಕಾರ್ಯಕರ್ತರು, ಶ್ರೀರಾಮನ ಭಕ್ತರು, ಯುವಕರು, ಮಹಿಳೆಯರು ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಸೋಮೇಶ್ವರ ದೇವಸ್ಥಾನದ ಅರ್ಚಕ ರಾಘವೇಂದ್ರ ಪೂಜಾರ, ಚಿಕ್ಕರಸ ಪೂಜಾರ, ಅಶ್ವಿನಿ ಅಂಕಲಕೋಟಿ, ನೀಲಮ್ಮ ಮೆಣಸಿನಕಾಯಿ, ಗಜಾನನ ಹೆಗಡೆ, ಅನಿಲ ಮುಳಗುಂದ, ಸಿದ್ದನಗೌಡ ಬಳ್ಳೊಳ್ಳಿ, ಗಂಗಾಧರ ಮೆಣಸಿನಕಾಯಿ, ದುಂಡೇಶ ಕೊಟಗಿ, ಚಂದ್ರಶೇಖರ ಹಂಪಣ್ಣವರ, ಶಿವಯೋಗಿ ಅಂಕಲಕೋಟಿ, ಬಸವರಾಜ ಮೆಣಸಿನಕಾಯಿ, ವಿರೇಶ ಚಿಂಚಲಿ, ಈರಣ್ಣ ಪೂಜಾರ, ಯಲ್ಲಪ್ಪಗೌಡ ಪಾಟೀಲ, ಶಿವು ಮೆಕ್ಕಿ, ದುಂಡಪ್ಪ ಸವಣೂರ, ರವಿ ಕಲ್ಲೂರ, ಸುರೇಶ ಚೌಕನವರ, ರಾಜಶೇಖರ ಶಿಗ್ಲಿಮಠ ಸೇರಿ ಮಹಿಳೆಯರು, ಯುವಕರು ಇದ್ದರು.

# ಪ್ರಾಮಾಣಿಕತೆ ನಿಮ್ಮನ್ನು ಸದಾಕಾಲ ಕಾಪಾಡುತ್ತದೆ

▶▶ ಮೊದಲನೇ ಪುಟದಿಂದ

ಇದೇ ಸಂದರ್ಭದಲ್ಲಿ 'ಅಭಿನವ ಶ್ರೀ ಶಿಷ್ಯವೇತನ'ವನ್ನು ಇಬ್ಬರು ವಿದ್ಯಾರ್ಥಿಗಳಿಗೆ ಶ್ರೀಗಳು ವಿತರಿಸಿದರು. ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಾ. ಪಿ. ಕೃಷ್ಣಪ್ಪ, ಹ್ಯೂಮನ್ ಮೈಂಡ್ ಸೆಟ್‌ನ ಕೋಚ್ ಮಹೇಶ ಮಾಸಾಳ, ಎಂ.ಜಿ. ಸೋಮಕಟ್ಟಿ, ರವೀಮದ್ರನಾಥ ದೊಡ್ಡಮೇಟಿ, ಎನ್. ಆರ್. ಗೌಡರ, ಬಸವರಾಜ ಕಳಕಣ್ಣವರ, ಎಂ.ಪಿ. ಪಾಟೀಲ, ವಿ.ಬಿ. ಸೋಮನಕಟ್ಟಿಮಠ, ಎಪಿಎಂಸಿ ಮಾಜಿ ಅಧ್ಯಕ್ಷ ಅಳಗವಾಡಿ, ಬಸವರಾಜ ನವಲಗುಂದ, ಎಂ.ಎಸ್. ದಢೇಸೂರಮಠ, ನಿಂಗನಗೌಡ ಲಕ್ಕನಗೌಡ್ರ, ಎಸ್.ಎ. ಪಾಟೀಲ, ಶೇಕಪ್ಪ ಜುಟ್ಲ, ಅಲ್ಲಾಭಕ್ಷಿ ನದಾಫ್, ಶೇಕಪ್ಪ ಕೆಂಗಾರ, ಶರಣಪ್ಪ ರೇವಡಿ, ನಿವೃತ್ತ ಉಪನ್ಯಾಸಕ ತಳಬಾಳ ಮುಂತಾದವರು ಉಪಸ್ಥಿತರಿದ್ದರು.

# ಕ್ರಿಮಿನಾಶಕ ಭೂಮಿಯ ಸತ್ವವನ್ನು ಕಳೆಯುತ್ತಿದೆ




■ ವಿಜಯಸಾಕ್ಷಿ ಸುದ್ದಿ, ರೋಣ

ಮುಂದಿನ 15 ವರ್ಷಗಳ ನಂತರ ಭಾರತದಲ್ಲಿ ಅಕ್ಕಿ, ಗೋದಿಯನ್ನು ಬೆಳೆಯಲು ಸಾಧ್ಯವಿಲ್ಲ ಎಂದು ಆಹಾರ ತಜ್ಞ ಡಾ. ಖಾದರ ಹೇಳಿದರು.

ಮಂಗಳವಾರ ಪಟ್ಟಣದ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ 'ಸಿರಿಧಾನ್ಯಗಳ ಮಾತು' ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು.

ದೇಶದ ರೈತರು ಸಾವಯವ ಗೊಬ್ಬರದ ಮಹತ್ವವನ್ನು ಅರಿಯದೇ ರಾಸಾಯನಿಕ ಗೊಬ್ಬರಗಳನ್ನು ಭೂಮಿಗೆ ಸೇರಿಸಿ, ಭೂಮಿಯ ಫಲವತ್ತತೆಯನ್ನು ಹಾಳುಮಾಡಿದ್ದು ಇದಕ್ಕೆ ಮುಖ್ಯ ಕಾರಣ. ದೇಹದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬಿರುವ ಕ್ರಿಮಿನಾಶಕ ಸಿಂಪಡಣೆ ಸಹ ಭೂಮಿಯ ಸತ್ವವನ್ನು ಕಳೆಯುತ್ತಿದೆ. ಇದರಿಂದ ದೇಶದ ಶೇ.35ರಷ್ಟು ಭೂಮಿ ತನ್ನ ಗುಣಧರ್ಮವನ್ನು ಕಳೆದುಕೊಂಡು ಬರಡಾಗುತ್ತಿದೆ ಎಂದರು.

ದೇಶದಲ್ಲಿ ಅನೇಕ ಕಂಪನಿಗಳು ನೀರಿನಿಂದಲೇ ತಮ್ಮ ಉತ್ಪನವನ್ನು ತಯಾರಿಸುತ್ತಿವೆ. ಮುಖ್ಯವಾಗಿ, ಕೆಜಿ ಸಕ್ಕರೆ ತಯಾರಿಸಲು 28 ಸಾವಿರ ಲೀಟರ್ ನೀರು ಖರ್ಚಾಗುತ್ತದೆ. ಭೂಮಿಯಿಂದ ನೀರು ಹೊದಾಗ ಭೂಮಿ ಹಸಿರಾಗಿರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು, ರೈತರು ಸಿರಿಧಾನ್ಯಗಳತ್ತ ಮುಖ ಮಾಡಬೇಕು, ಭೂಮಿಯ ಫಲವತ್ತತೆಯನ್ನು ಕಾಪಾಡಬೇಕು ಎಂದರು.

ಮುಖಂಡ ಐ.ಎಸ್. ಪಾಟೀಲ ಮಾತನಾಡಿ, ಇಂದಿನ ಆಹಾರ ಪದ್ಧತಿಯಿಂದ ಅನೇಕ ರೋಗಗಳು ಆವರಿಸುತ್ತಿವೆ. ನಾಗರಿಕ ಸಮುದಾಯ ಸಿರಿಧಾನ್ಯಗಳ ಬಳಕೆ ಮಾಡುವ ಮೂಲಕ ದೇಹದ ಸದೃಢತೆಯನ್ನು ಕಾಯ್ದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರವೀಂದ್ರ ಪಾಟೀಲ, ಕೃಷಿ ಅಧಿಕಾರಿ ಶಿವಪುತ್ರಪ್ಪ ದೊಡ್ಡಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಶಕ್ತ ಭೂಮಿಯಿಂದ ಸದೃಢ ಬೆಳೆ ಸಾಧ್ಯ

▶▶ ಮೊದಲನೇ ಪುಟದಿಂದ

ಜೋಳ, ಗೋದಿ, ಕಡಲೆ, ಕುಸುಬೆ ಬೆಳೆಗೆ ಕಡಿಮೆ ಪ್ರಮಾಣದ ತೇವಾಂಶವಿದ್ದರೂ ಉತ್ತಮ ಇಳುವರಿಯನ್ನು ಕೊಡುವ ಸಾಮರ್ಥ್ಯವನ್ನು ಈ ಪ್ರದೇಶದ ಕೃಷಿ ಭೂಮಿ ಹೊಂದಿದೆ. ಮಣ್ಣಿನ ಸತ್ವ ಮತ್ತು ಫಲವತ್ತತೆಯನ್ನು ಕಾಯ್ದುಕೊಳ್ಳವಲ್ಲಿ ರೈತ ಬಾಂಧವರು ಮುತುವರ್ಜಿ ವಹಿಸಬೇಕೆಂದರು.

ಕೃಷಿ ಚಟುವಟಿಕೆಗಳೊಂದಿಗೆ ಆದಾಯ ನೀಡಬಲ್ಲ ದ್ವಿತೀಯ ಕೃಷಿ ಚಟುವಟಿಕೆಗಳಾದ ಕೋಳಿ, ಕುರಿ, ಆಡು ಸಾಕಾಣಿಯೂ ಸೇರಿದಂತೆ ಹೈನುಗಾರಿಕೆ ರೈತ ಬಾಂಧವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬಲ್ಲದು. ವಾಣಿಜ್ಯ ಬೆಳೆಗಳಾದ ಹತ್ತಿ, ಹೆಸರು, ಮೆಣಸಿನಕಾಯಿ ಬೆಳೆಗಳು ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಬಲ್ಲವು ಎಂದರು.

ಬೆಳವಟಗಿ ಕೃ.ಸಂ.ಕೇಂದ್ರದ ಕೀಟ ಶಾಸ್ತ್ರಜ್ಞ ಡಾ. ಸಿ.ಎಂ. ರಫಿ, ಅಣ್ಣಿಗೇರಿಯ ಕೃ.ಸಂ. ಕೇಂದ್ರದ ತಳಿವರ್ಧಕರಾದ ಡಾ. ಬಿ.ಎನ್. ಮೋಟಗಿ, ಬೇಸಾಯ ಶಾಸ್ತ್ರಜ್ಞರಾದ ಡಾ. ಎಸ್.ಜಿ. ಬಾಲ್ಕುಂದೆ, ಡಾ.ಪ್ರಭಾವತಿ ರಾವ್, ಸಂತೋಷ ಹಂಡಗೆ ಉಪನ್ಯಾಸ ನೀಡಿ, ರೈತರ ಕೃಷಿ ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳನ್ನು ಸೂಚಿಸಿದರು.

ಗದಗ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಎಸ್. ಎಲ್. ಪಾಟೀಲ ನಿರೂಪಿಸಿದರು. ದೇಶಿ ಯೋಜನೆಯ ಫೆಸಿಲಿಟೇಟರ್ ಎಸ್.ವ್ಹಿ. ಸೂಡಿಶೆಟ್ಟರ ವಂದಿಸಿದರು.

# ರಾಜ್ಯ ಮುಸ್ಲಿಂ ನೌಕರರ ಸಂಘದ ಉಪಾಧ್ಯಕ್ಷರಾಗಿ ಹಂಚಿನಮನಿ ನೇಮಕ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ (ಮೇವಾ) ಉಪಾಧ್ಯಕ್ಷರಾಗಿ ನಿಯಾಜ್ ಅಹ್ಮದ ಹಂಚಿನಮನಿ ಆಯ್ಕೆಯಾಗಿದ್ದಾರೆ.

ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲೂಕಿನ ತಡಸ ಗ್ರಾಮದ ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ನಿಯಾಜ್ ಅಹ್ಮದ್ ಹಂಚಿನಮನಿ ಅಲ್ಪಸಂಖ್ಯಾತ ಸಮುದಾಯದ ಏಳಿಗೆಗಾಗಿ, ಶಾಲಾ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವಲ್ಲಿ ಶ್ರಮವಹಿಸಿ ವಿದ್ಯಾರ್ಥಿಗಳಿಗೆ ನೀಡಿದ ಮಾರ್ಗದರ್ಶನ, ಸಾಮಾಜಿಕ ಸೇವೆಯನ್ನು ಗುರುತಿಸಿ



ಸಂಘದ ರಾಜ್ಯಾಧ್ಯಕ್ಷ ಮೊಹಮ್ಮದ್ ಸಲೀಂ ಹಂಚಿನಮನಿ ಈ ನೇಮಕ ಮಾಡಿದ್ದಾರೆ.

ಹಂಚಿನಮನಿ ಅವರನ್ನು ಗದಗ ಜಿಲ್ಲಾ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಬೇಡಿಕೆಗಳ ಅನುಷ್ಠಾನಕ್ಕಾಗಿ ಸರ್ಕಾರಕ್ಕೆ ಮನವಿ



■ ವಿಜಯಸಾಕ್ಷಿ ಸುದ್ದಿ, ಗದಗ

7ನೇ ವೇತನ ಆಯೋಗ ಜಾರಿ, ಹೊಸ ಪಿಂಚಣಿ ಯೋಜನೆ ರದ್ದತಿ, ಆರೋಗ್ಯ ಸಂಜೀವಿನಿ ಸೇರಿದಂತೆ ಹಲವು ಬೇಡಿಕೆಗಳ ಅನುಷ್ಠಾನಕ್ಕಾಗಿ ಒತ್ತಾಯಿಸಿ ಜ.20ರೊಳಗಾಗಿ ಗದಗ ಜಿಲ್ಲಾ ಉಸ್ತುವಾರಿ ಸಚಿವರಿಗೆ ಹಾಗೂ ಜಿಲ್ಲೆಯ ಎಲ್ಲ ಶಾಸಕರಿಗೆ ಮನವಿ ನೀಡುವ ಮೂಲಕ ರಾಜ್ಯ ಸರಕಾರದ ಗಮನ ಸೆಳೆಯಬೇಕೆಂದು ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಗುಂಜೀಕರ ಹೇಳಿದರು.

ನಗರದ ಸರಕಾರಿ ನೌಕರ ಭವನದಲ್ಲಿ ಇತ್ತೀಚೆಗೆ ಜರುಗಿದ ಸಂಘದ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈಗಾಗಲೇ 7ನೇ ವೇತನ ಆಯೋಗವನ್ನ ರಚಿಸಿ ಇತರೆ ರಾಜ್ಯಗಳಲ್ಲಿನ ಸರಕಾರಿ ನೌಕರರ ವೇತನ ಮತ್ತು ಇತರೆ ಸವಲತ್ತುಗಳ ಬಗ್ಗೆ ಆಯೋಗ ಅಧ್ಯಯನ ನಡೆಸಿ, ವರದಿಯನ್ನು ಸಿದ್ಧಪಡಿಸಿದೆ. 7ನೇ ವೇತನ ಆಯೋಗ ತಕ್ಷಣವೇ ರಾಜ್ಯ ಸರಕಾರದೆದುರು ಮಂಡಿಸಲಿ. ಈಗಿರುವ ಹೊಸ ಪಿಂಚಣಿ ಯೋಜನೆಯನ್ನು ಕೈಬಿಟ್ಟು ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುವ ಮೂಲಕ ಸರಕಾರಿ ನೌಕರರ ಹಿತ ಕಾಪಾಡುವಲ್ಲಿ ಮುಂದಾಗಲಿ ಎಂದರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಕೋಶಾಧ್ಯಕ್ಷ ಸತೀಶ ಕಟ್ಟಿಮನಿ, ಪ್ರಧಾನ ಕಾರ್ಯದರ್ಶಿ ಕೆ.ಬಿ. ಕೊಣ್ಣೂರ, ಉಪಾಧ್ಯಕ್ಷರಾದ ಸಿದ್ದಪ್ಪ ಲಿಂಗದಾಳ, ಎಸ್.ಬಿ. ಬಿರಕಬ್ಬಿ, ದುರಗಣ್ಣವರ, ಭರಮಪ್ಪ, ತಿಪ್ಪಣ್ಣವರ, ಯಳಮಲಿ, ಮಲ್ಲಿಕಾರ್ಜುನ ಹನಸಿ, ಐ.ಎ. ಗಾಡಗೋಳಿ, ಶಿರಬಡಗಿ, ಸತೀಶ, ಮಂಜು ಬಂಡಿವಡ್ಡರ, ಮಲ್ಲಿಕಾರ್ಜುನ ಕಲಕಂಬಿ, ಕಿಲಬನವರ, ರಮೇಶ, ಎಸ್.ಆರ್. ಬಂಡಿ ಸೇರಿದಂತೆ ಹಲವರಿದ್ದರು.

# ರೈತರು ಯಾವುದೇ ಜಾತಿ, ಪಕ್ಷಕ್ಕೆ ಸೀಮಿತವಲ್ಲ

■ ವಿಜಯಸಾಕ್ಷಿ ಸುದ್ದಿ, ರೋಣ

ಸಚಿವ ಶಿವನಾಂದ ಪಾಟೀಲರು ರೈತರ ವಿರುದ್ಧ ಹಗುರವಾಗಿ ಮಾತನಾಡಿದ್ದು ಖಂಡನೀಯ. ಸರ್ಕಾರ ಈ ಕೂಡಲೇ ಅವರಿಂದ ರಾಜೀನಾಮೆ ಪಡೆಯಬೇಕು ಎಂದು ರೈತ ಸೇನಾ ತಾಲೂಕಾ ಉಪಾಧ್ಯಕ್ಷ ಶಿವಲಿಂಗಪ್ಪ ಭೋಪಳಾಪೂರ ಒತ್ತಾಯಿಸಿದರು.

ಅವರು ಮಂಗಳವಾರ ಪಟ್ಟಣದ ಎಂಆರ್‌ಬಿಸಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರೈತರು ಒಂದು ಪಕ್ಷಕ್ಕೆ ಅಥವಾ ಜಾತಿ, ಧರ್ಮಕ್ಕೆ ಸಿಮಿತವಾಗಿಲ್ಲ. ಅಲ್ಲದೆ ರೈತರಿದ್ದಾಗ



ಮಾತ್ರ ನಾಡಿಗೆ ಶಕ್ತಿ ಬರುತ್ತದೆ ಎನ್ನುವುದನ್ನು ಸಚಿವ ಶಿವಾನಂದ ಪಾಟೀಲ ಹಾಗೂ ರಾಜ್ಯ ಸರಕಾರ ತಿಳಿದುಕೊಳ್ಳಬೇಕು. ಸಚಿವ ಶಿವಾನಂದ ಪಾಟೀಲ ರಾಜೀನಾಮೆಯನ್ನು ಸಲ್ಲಿಸಬೇಕಲ್ಲದೆ, ರೈತರಲ್ಲಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ಇನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಮುಖಂಡರು ಮಹಿಳೆಯರ ಬಗ್ಗೆ ಕೆಟ್ಟ ಪದಗಳನ್ನು ಉಪಯೋಗಿಸುವುದನ್ನು ನಿಲ್ಲಿಸಬೇಕು. ಭಾರತ ದೇಶದಲ್ಲಿ ಮಹಿಳೆಯರನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತಿದೆ. ಮುಖ್ಯವಾಗಿ ಹಿಂದೂ ಸಮಾಜದಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನಗಳಿವೆ ಎನ್ನುವುದನ್ನು ಹಿಂದೂ ಸಂಘಟನೆಗಳ ಮುಖಂಡರು ಅರಿತುಕೊಳ್ಳಬೇಕು. ಸರಕಾರ ಕೂಡಲೇ ಸಮಾಜ ಘಾತುಕ ಶಕ್ತಿಗಳನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾರುತಿ ತಳವಾರ, ಕಲ್ಮೇಶ ದೊಡ್ಡಮನಿ, ಶೆಟ್ಟಪ್ಪ ಆಲೂರ, ಮುದಿಯಪ್ಪ ಮಾದರ, ಲಕ್ಷ್ಮಣ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ವಿಡಿಎಸ್ ಕ್ಲಾಸಿಕ್ ಪ್ರಾಥಮಿಕ ಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ವಿದ್ಯಾದಾನ ಸಮಿತಿ ಕ್ಲಾಸಿಕ್ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಬುಧವಾರ 10ನೇ ವಾರ್ಷಿಕ ಕ್ರೀಡಾಕೂಟ ಜರುಗಲಿದೆ.

ಸಮಿತಿಯ ಅಧ್ಯಕ್ಷ ಡಿ.ಬಿ. ಹುಯಿಲಗೋಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ನಗರದ ಪ್ರಸಿದ್ಧ ಮುಷ್ಟಿ ಕರಾಟೆ ಫೌಂಡೇಶನ್ ಅಧ್ಯಕ್ಷೆ ವರಲಕ್ಷ್ಮೀ ಬಿ.ಹೊಂಬಾಳಿ ಕಾರ್ಯಕ್ರಮ ಉದ್ಘಾಟಿಸುವರು. ಸಂಸ್ಥೆಯ ಕಾರ್ಯದರ್ಶಿ ಶ್ರೀನಿವಾಸ ಹುಯಿಲಗೋಳ ಹಾಗೂ ಆಡಳಿತಾಧಿಕಾರಿ ಡಾ. ಗಂಗೂಬಾಯಿ ಪವಾರ ಅತಿಥಿಗಳಾಗಿ ಆಗಮಿಸುವರು. ಬಾಲಕ/ಬಾಲಕಿಯರ ಪ್ರೌಢಶಾಲೆಯ ದೈಹಿಕ ಶಿಕ್ಷಕರಾದ ಪಿ.ಜಿ. ನಾಯಕ್ ಹಾಗೂ ರಮೇಶ ಲಮಾಣಿ ಕ್ರೀಡಾಕೂಟದ ನಿರ್ಣಾಯಕರಾಗಿ ಕಾರ್ಯಕ್ರಮ ನಿರ್ವಹಿಸುವರು. ಶಾಲೆಯ ಮುಖ್ಯೋಪಾಧ್ಯಯ ಎಂ.ಆರ್. ಡೊಳ್ಳಿನ, ಕ್ರೀಡಾಕೂಟ ಸಮಿತಿಯ ಸಂಚಾಲಕರಾದ ಸುಮಂಗಲಾ ಆಸಂಗಿ, ವೀಣಾ ನಾಯಕ, ವೀಣಾ ಹುಬ್ಬಳ್ಳಿ, ಶಾಲಾ ಸಂಸತ್ತಿನ ಕ್ರೀಡಾಮಂತ್ರಿ ಶ್ರೇಯಾ ತಿಪ್ಪಣ್ಣವರ, ಶಾಲೆಯ ಸಮಸ್ತ ಶಿಕ್ಷಕ/ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಸ್ವಾಗತ ಕೋರಿದ್ದಾರೆ.

## ಸಾಲಬಾಧೆಗೆ ನೊಂದ ರೈತ ಆತ್ಮಹತ್ಯೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ತಾಲೂಕಿನ ಕುಂದ್ರಳ್ಳಿ ಗ್ರಾಮದ ಕುಬೇರಪ್ಪ ಮಾರುತೆಪ್ಪ ತಳವಾರ (46) ಎಂಬ ರೈತ ಸಾಲಬಾಧೆಗೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ಜರುಗಿದೆ. ಮೃತ ರೈತ ಶಿರಹಟ್ಟಿಯ ಕೆನರಾ ಬ್ಯಾಂಕಿನಲ್ಲಿ 1.20 ಲಕ್ಷ ರೂ ಕೃಷಿ ಸಾಲ ಮತ್ತು ಒಂದಷ್ಟು ಕೈ ಸಾಲ ಮಾಡಿಕೊಂಡಿದ್ದ ಎನ್ನಲಾಗಿದ್ದು, ಇರುವ 2 ಎಕರೆ ಜಮೀನಿನಲ್ಲಿ ಕಳೆದ 3-4 ವರ್ಷಗಳಿಂದ ಬೆಳೆಯೂ ಬಂದಿರಲಿಲ್ಲ. ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣದೊಂದಿಗೆ ಸಾಲ ತೀರಿಸುವ ಚಿಂತೆಯಿಂದ ಮನನೊಂದು ಸೋಮವಾರ ರಾತ್ರಿ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಕುರಿತು ಪತ್ನಿ ಸಂಗೀತಾ ಕುಬೇರಪ್ಪ ತಳವಾರ ನೀಡಿದ ಹೇಳಿಕೆ ಹಿನ್ನೆಲೆಯಲ್ಲಿ ಲಕ್ಷ್ಮೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಖಾಲಿಯೆನಿಸಿದ ಮನೆ ಜಗುಲಿ | ಮಕ್ಕಳ ಚಿತಾಭಸ್ಮ ನೋಡಿ ಬಿಕ್ಕಿ ಬಿಕ್ಕಿ ಅತ್ತ ಹೆತ್ತವರು

# ಸೆಲೆಬ್ರಿಟಿಗಳ ಮೇಲಿನ ಹುಚ್ಚು ಅಭಿಮಾನ ದೂರಾಗಲಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನಟ ಯಶ್ ಜನ್ಮದಿನದ ಹಿನ್ನೆಲೆಯಲ್ಲಿ ತಾಲೂಕಿನ ಸೂರಣಗಿ ಗ್ರಾಮದಲ್ಲಿ ಜ.7ರಂದು ತಡರಾತ್ರಿ ಯಶ್ ಅವರ ಕಟೌಟ್ ಅಳವಡಿಸುವ ವೇಳೆ ವಿದ್ಯುತ್ ತಂತಿ ತಗುಲಿ ಮೃತಪಟ್ಟಿದ್ದ ಮುರಳಿ, ನವೀನ, ಹನಮಂತ ಈ ಮೂವರು ಯುವಕರ ಮನೆಯಲ್ಲಿ ಮಂಗಳವಾರ ಸ್ಮಶಾನ ಮೌನ ಆವರಿಸಿತ್ತು. ಮೃತ ಕುಟುಂಬಕ್ಕೆ ಸಾಂತ್ವನ ಹೇಳಲು ಬರುವವರ ಮುಂದೆಲ್ಲ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ನೆನೆದು ಎದೆ ಬಡಿದುಕೊಂಡು ದುಃಖ ತೋಡಿಕೊಂಡ ದೃಶ್ಯ ಎಲ್ಲರ ಮನ ಕಲಕುವಂತಿತ್ತು.

ಮಂಗಳವಾರ ಬೆಳಿಗ್ಗೆಯೇ ಕುಟುಂಬಸ್ಥರು, ಸಂಬಂಧಿಕರು, ನೆರೆಹೊರೆಯವರು ಅಂತ್ಯ ಸಂಸ್ಕಾರ ನೆರವೇರಿಸಿದ ಸ್ಮಶಾನ ಭೂಮಿಗೆ ತೆರಳಿ, ಪಿಂಡ ಪ್ರಧಾನ, ಕೇಶ ಮುಂಡನದಂತಹ 3ನೇ ದಿನ ಕಾರ್ಯ ಮಾಡಿದರು. ಈ ವೇಳೆ ಸ್ಮಶಾನದಲ್ಲಿ ಚಿತಾಭಸ್ಮ ನೋಡಿ ನೆಲ ಬಡಿದು, ಬಿಕ್ಕಿ ಬಿಕ್ಕಿ ಅತ್ತ ಹೆತ್ತವರ ಕರುಳಿನ ಕೂಗು ಅರಣ್ಯರೋದನದಂತಾಗಿತ್ತು.

ಮೃತರ ಕುಟುಂಬವನ್ನು ಭೇಟಿ ಮಾಡಿ, ಸಾಂತ್ವನ ಹೇಳಲು ಆಗಮಿಸಿದ ಸಂದರ್ಭದಲ್ಲಿ ತಮ್ಮ ಮೇಲಿನ ಅಭಿಮಾನದಿಂದ ದುರಂತವಾಗಿ ಸಾವನ್ನಪ್ಪಿದ ಯುವಕರ ಪಾಲಕರ ನೋವು, ಸಂಕಟ ಕಂಡು ನಟ ಯಶ್ ಭಾವುಕರಾಗಿದ್ದರು.



ಈ ವೇಳೆ ಅವರು ಯಾವುದೇ ಪರಿಹಾರ, ಸಹಾಯ ಘೋಷಿಸುವುದು ಸೂಕ್ತವಲ್ಲ ಎಂದು ಭಾವಿಸಿ, ವಾಪಸ್ ತೆರಳುವಾಗ ಮಾರ್ಗ ಮಧ್ಯದಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಎಸ್‌ಪಿ ಬಿ.ಎಸ್. ನೇಮಗೌಡರ ಅವರೊಂದಿಗೆ ಮಾತನಾಡಿ, ಮೃತ ಕುಟುಂಬದ ಸದಸ್ಯರೋರ್ವರ ಬ್ಯಾಂಕ್ ಪಾಸ್‌ಬುಕ್, ಆಧಾರ್ ಕಾರ್ಡ್ ತಮಗೆ ತಲುಪಿಸುವಂತೆ ಸೂಚಿಸಿದ್ದರೆನ್ನಲಾಗಿದೆ.

ಅದರನ್ವಯ ಶಾಸಕರ ಆಪ್ತರು ಮಂಗಳವಾರ ಈ ದಾಖಲೆಗಳನ್ನು ಸಂಗ್ರಹಿಸಿದ್ದು, ಬೆಂಗಳೂರಿನಲ್ಲಿ ಯಶ್ ಅವರನ್ನು ಭೇಟಿ ಮಾಡಿ ದಾಖಲೆ ತಲುಪಿಸಿರುವದಾಗಿ ಆಪ್ತರು ತಿಳಿಸಿದ್ದಾರೆ.

ಗುರುವಾರ ಅಮಾವಾಸ್ಯೆ ಇರುವುದರಿಂದ 3 ಕುಟುಂಬದವರು ತಮ್ಮ ಮನೆಯನ್ನು ಸ್ವಚ್ಛಗೊಳಿಸಿ ಮಂಗಳವಾರ ಸಂಜೆಯೇ ಸಂಪ್ರದಾಯದಂತೆ ಗೃಹಶಾಂತಿ ಪೂಜೆ ನೆರವೇರಿಸಿದರು. ಪೊಲೀಸರು, ಹೆಸ್ಕಾಂ ಅಧಿಕಾರಿಗಳು ಘಟನಾ ಸ್ಥಳದ ಮಹಜರು ಮಾಡಿದರು. ಶಾಸಕ ಸಿ.ಸಿ. ಪಾಟೀಲ ಅವರ ಪುತ್ರ ಉಮೇಶಗೌಡ ಪಾಟೀಲ ಸೇರಿದಂತೆ ಸ್ಥಳೀಯ ಮುಖಂಡರು ಭೇಟಿ ನೀಡಿ ಸಾಂತ್ವನ ಹೇಳಿದರು.

ಗದಗ ಹತ್ತಿರದ ಬಿಂಕದಕಟ್ಟಿ ಗ್ರಾಮದ ನಿಖಿಲ್ ಗೌಡರ ಎಂಬ ಯುವ ಅಭಿಮಾನಿ, ನಟ ಯಶ್ ಸೂರಣಗಿಗೆ ಭೇಟಿ ನೀಡಿ ವಾಪಸ್ ತೆರಳುತ್ತಿದ್ದಾಗ ಅವರನ್ನು ನೋಡುವ ಭರದಲ್ಲಿ ಬೈಕ್ ಅಪಘಾತಕ್ಕೀಡಾಗಿ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದ. ಈತ ಲಕ್ಷ್ಮೇಶ್ವರದ ಅಗಡಿ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದರಿಂದ ಕಾಲೇಜಿನ ನೂರಾರು ವಿದ್ಯಾರ್ಥಿಗಳು, ಉಪನ್ಯಾಸಕ ವೃಂದ ವಿದ್ಯಾರ್ಥಿಯ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡು ಶ್ರದ್ಧಾಂಜಲಿ ಸಲ್ಲಿಸಿದರು.

ಗಾಯಗೊಂಡ ಹನಮಂತ ಹರಿಜನ, ಮಂಜು ಹರಿಜನ ಜಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದು, ಇನ್ನೋರ್ವ ಗಾಯಾಳು ಪ್ರಕಾಶ ಮ್ಯಾಗೇರಿ ಸಂಪೂರ್ಣ ಗುಣಮುಖರಾಗಿದ್ದು, ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ.

ಒಟ್ಟಿನಲ್ಲಿ ನಟ ಯಶ್ ಮೇಲಿನ ಹುಚ್ಚು ಅಭಿಮಾನಕ್ಕೆ 4 ಮುಗ್ಧ ಯುವಕರು ಬಲಿಯಾಗಿದ್ದು ಮಾತ್ರ ದುರಂತ. ಇನ್ನಾದರೂ ಯುವಕರು ಸಿನಿಮಾ ನಾಯಕ ನಟರ ಮೇಲಿನ ಹುಚ್ಚು ಅಭಿಮಾನದಿಂದ ದುಸ್ಸಾಹಸಕ್ಕೆ ಮುಂದಾಗಬಾರದು ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬಂದವು.

## ಉದ್ಘಾಟನೆಗೂ ಮುನ್ನವೇ ಪಾಳುಬಿದ್ದ ಅಂಗನವಾಡಿ ಕಟ್ಟಡ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಗೊಜನೂರ ಗ್ರಾಮದಲ್ಲಿ ಅಂಗನವಾಡಿ ಕಟ್ಟಡವೊಂದರ ನಿರ್ಮಾಣ ಕಾಮಗಾರಿ ಅರ್ಧಕ್ಕೆ ನಿಂತು, ಉದ್ಘಾಟನೆಗೆ ಮೊದಲೇ ಪಾಳು ಬಿದ್ದಂತಾಗಿದೆ.

ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ತಾಲೂಕಾ ಪಂಚಾಯಿತಿಯ 5 ಲಕ್ಷ ರೂ ಅನುದಾನದಲ್ಲಿ ಪಿಆರ್‌ಇಡಿ ವತಿಯಿಂದ ಅಂಗನವಾಡಿ ಕಟ್ಟಡ ಕಾಮಗಾರಿ ಕೈಗೊಳ್ಳಲಾಗಿದೆ. ವರ್ಷದ ಹಿಂದೆಯೇ ಸಜ್ಜಾ ಲಿಂಟಲ್‌ವರೆಗೆ ಕಟ್ಟಡ ನಿರ್ಮಿಸಿ ಬಾಗಿಲು, ಕಿಟಕಿ ಚೌಕಟ್ಟ ನಿಲ್ಲಿಸಿ ಕೈತೊಳೆದುಕೊಳ್ಳಲಾಗಿದೆ. ಕಟ್ಟಡದಲ್ಲಿ ಜಾಲಿಕಂಟಿ ಬೆಳೆದು ತ್ಯಾಜ್ಯ ವಿಲೇವಾರಿ, ಮೂತ್ರ ವಿಸರ್ಜನೆ ಸ್ಥಳವಾಗಿ ಮಾರ್ಪಟ್ಟಿದೆ. ತಾ.ಪಂ ಮತ್ತು ಗ್ರಾ.ಪಂನ ಒಟ್ಟು 13 ಲಕ್ಷ ರೂ ವೆಚ್ಚದ ಈ ಕಾಮಗಾರಿಯ ಅನುಷ್ಠಾನಕ್ಕೆ ಪಿಆರ್‌ಇಡಿಗೆ ವಹಿಸಲಾಗಿತ್ತು. ಮೊದಲ ಹಂತದಲ್ಲಿ 5 ಲಕ್ಷ ರೂ ಅನುದಾನದಲ್ಲಿ ಅರ್ಧಮರ್ಧ ಕಾಮಗಾರಿ ಮಾಡಿ ಕೈತೊಳೆದುಕೊಂಡಿದ್ದಾರೆ.



ಹೊಸ ಕಟ್ಟಡದಲ್ಲಿ ಓದಬೇಕಾದ ಅಂಗನವಾಡಿ ಕೇಂದ್ರ ಸಂಖ್ಯೆ 43ರಲ್ಲಿನ 48 ಮಕ್ಕಳು ಬಾಡಿಗೆ ಕಟ್ಟಡದಲ್ಲಿ ಕಲಿಯುತ್ತಿದ್ದಾರೆ. ಅನೇಕ ಕಡೆ ಕಟ್ಟಡ ನಿರ್ಮಾಣಕ್ಕೆ ನಿವೇಶನ ಕೊರತೆ ಇರುತ್ತದೆ. ಆದರೆ ಇಲ್ಲಿ ನಿವೇಶನ ಮತ್ತು ಅನುದಾನ ಬಳಸಲು ಅವಕಾಶವಿದ್ದರೂ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ಕಟ್ಟಡ ಅರ್ಧಕ್ಕೆ ನಿಂತು ಹಾಳಾಗಿದೆ. ಸಂಬಂಧಪಟ್ಟವರು ಕಟ್ಟಡ ಕಾಮಗಾರಿ ಪೂರ್ಣಗೊಳಿಸಿ ಮಕ್ಕಳ ಕಲಿಕೆಗೆ ಅನಕೂಲ ಕಲ್ಪಿಸಬೇಕು ಎಂಬುದು ಗ್ರಾಮಸ್ಥರ ಒತ್ತಾಯವಾಗಿದೆ.

ಈ ಬಗ್ಗೆ ತಾ.ಪಂ ಇಓ ಕೃಷ್ಣಪ್ಪ ಧರ್ಮರ ಮತ್ತು ಗ್ರಾ.ಪಂ ಅಧ್ಯಕ್ಷ-ಪಿಡಿಓ ಅವರನ್ನು ಸಂಪರ್ಕಿಸಲಾಗಿ, ತಾಲೂಕಾ ಪಂಚಾಯಿತಿಯ 5 ಲಕ್ಷ ರೂ ಅನುದಾನದ ಕಾಮಗಾರಿ ಪೂರ್ಣಗೊಂಡಿಲ್ಲ. ಕಟ್ಟಡ ಪೂರ್ಣಗೊಳಿಸಲು ಗ್ರಾ.ಪಂ ಅನುದಾನ ಬಳಕೆಗೆ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದ್ದು, ಅನುಮೋದನೆ ಪಡೆದು ಕಟ್ಟಡ ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದಾರೆ.

## ಅತಿಥಿ ಉಪನ್ಯಾಸಕರ ಪ್ರಮುಖ ಬೇಡಿಕೆಗಳನ್ನು ಈಡೇರಿಸಿದ ಸರ್ಕಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರ ಮೂಲಭೂತ ಸಮಸ್ಯೆಗಳನ್ನು ಅರಿತುಕೊಂಡಿರುವ ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಉಪನ್ಯಾಸಕರ ಬಗ್ಗೆ ಅಪಾರ ಕಳಕಳಿ ಹೊಂದಿರುವ ಕೆ.ಎಸ್. ಪುಟ್ಟಣ್ಣ ಅವರು ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಆರ್.ಕಲ್ಮನಿ ಹಾಗೂ ಪ್ರಧಾನ ಕಾರ್ಯದರ್ಶಿ ಡಾ.ಪೀಟರ್, ಪ್ರಮುಖ ಮುಖಂಡರೊಂದಿಗೆ ಚರ್ಚಿಸಿ, ಅತಿಥಿ ಉಪನ್ಯಾಸಕರ ಸಮಸ್ಯೆಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರೊಂದಿಗೆ ವಿಶೇಷ ಸಭೆ ನಡೆಸಿದ್ದು, ಕೆಲ ಪ್ರಮುಖ ಬೇಡಿಕೆಗಳನ್ನು ಸರ್ಕಾರ ಈಡೇರಿಸಿದೆ.



ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಿರುವ ಸಿಎಂ ಸಿದ್ಧರಾಮಯ್ಯನವರಿಗೆ, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ, ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ, ಕೆ.ಎಸ್. ಪುಟ್ಟಣ್ಣನವರಿಗೆ, ವಿ.ಪ ಸದಸ್ಯರಾದ ಅ.ದೇವೆಗೌಡ, ಎಸ್.ವ್ಹಿ. ಸಂಕನೂರು, ಹನಮಂತ ನಿರಾಣಿ, ಎ.ಎ.ಪಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಸೇರಿದಂತೆ ಹೋರಾಟಕ್ಕೆ ಸಹಕಾರ ನೀಡಿದ ಜನಪ್ರತಿನಿಧಿಗಳಿಗೆ, ಮಾಧ್ಯಮದವರಿಗೆ ಸಂಘದ ವತಿಯಿಂದ ಡಾ.ಹನುಮಂತಗೌಡ ಆರ್.ಕಲ್ಮನಿ ಅಭಿನಂದಿಸಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಪೀಟರ್, ಡಾ.ಧರ್ಮವೀರ, ಡಾ.ಮುನಿರಾಜು, ಡಾ.ಶಶಿಕಲಾ ಜೋಳದ, ಡಾ.ಮಲ್ಲಿಕಾರ್ಜುನ, ಡಾ.ಚಂದ್ರಶೇಖರ ಕಾಳನ್ನವರ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ರಾಜ್ಯ ಸರ್ಕಾರವನ್ನು ಅಭಿನಂದಿಸಿದ್ದಾರೆ.

## ವಿದ್ಯಾರ್ಥಿ ಬಳಗದಿಂದ ಸನ್ಮಾನ ಸಮಾರಂಭ



■ ವಿಜಯಸಾಕ್ಷಿ ಸುದ್ದಿ, ನರಗುಂದ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ-ಶ್ರೀ ದೊರೆಸ್ವಾಮಿ ವಿರಕ್ತಮಠ ಭೈರನಹಟ್ಟಿ, ಶ್ರೀ ಸಿದ್ಧೇಶ್ವರ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಬಳಗದ ಸಹಯೋಗದಲ್ಲಿ ಪ್ರೊ. ಪಿ.ಎಸ್. ಅಣ್ಣಿಗೇರಿ ಇವರು ನಿವೃತ್ತರಾದ ನಿಮಿತ್ತ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಮಾರಂಭದಲ್ಲಿ ಗದಗ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ಶಿವಪ್ಪ ಕುರಿ, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಡಿ.ಎಸ್. ತಳವಾರ, ಜಿಲ್ಲಾ ಕಸಾಪ ಮಾಜಿ ಕೋಶಾಧ್ಯಕ್ಷ ಮಲ್ಲೇಶ ಡಿ.ಎಚ್., ಸದಸ್ಯ ಬೂದೀಶ ಬಿರುಗೊಣ್ಣನವರರನ್ನು ಸನ್ಮಾನಿಸಿ ಗೌರವಿಸಲಾಯಿತು. ಪೂಜ್ಯ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು.



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನಗರದ ದಿ ಯೂನಿಕ್ ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ ಭವಾನಿ.ಎಂ. ಗೌಡರ ಗದಗನಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯ ಭರತನಾಟ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದು, ಡಿಡಿಪಿಐ ಅವರಿಂದ ಪ್ರಶಸ್ತಿ ಸ್ವೀಕರಿಸಿದಳು.

## ತೊಳಲಿ ಗ್ರಾಮದ ಬಳಿ ಅಕ್ರಮ ಮರಳು ವಶಕ್ಕೆ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ರವಿವಾರ ಬೆಳಿಗ್ಗೆ 10.15ರ ಸುಮಾರಿಗೆ ಶಿರಹಟ್ಟಿ ತಾಲೂಕಿನ ತೊಳಲಿ ಗ್ರಾಮದ ಬಳಿಯ ತುಂಗಭದ್ರಾ ನದಿಯ ದಡದಲ್ಲಿ 4 ತೆಪ್ಪ ಹಾಗೂ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಮರಳನ್ನು ಪೊಲೀಸ್, ಕಂದಾಯ ಹಾಗೂ ಗಣಿ ಇಲಾಖೆಯ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.



4 ತೆಪ್ಪಗಳ ಸಹಾಯದಿಂದ ಅಕ್ರಮವಾಗಿ 8-10 ಜನರು ಮರಳನ್ನು ತೆಗೆಯುತ್ತಿದ್ದಾಗ ಅಧಿಕಾರಿಗಳು ದಾಳಿ ನಡೆಸಿದ್ದರು. ಈ ಸಮಯದಲ್ಲಿ ಮರಳು ಸಂಗ್ರಹಿಸಿದ್ದ ತೆಪ್ಪಗಳನ್ನು ನೀರಿನಲ್ಲಿ ಮಗುಚಿ ಹಾಕಿ ಅಧಿಕಾರಿಗಳನ್ನು ನೋಡಿ ಪರಾರಿಯಾಗಿದ್ದಾರೆ. 4 ತೆಪ್ಪಗಳನ್ನು ವಶಪಡಿಸಿಕೊಂಡು ಶಿರಹಟ್ಟಿ ಪಿಎಸ್‌ಐ ಈರಣ್ಣ ರಿತ್ತಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಕೊಂಡಿದ್ದಾರೆ. ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಮರಳನ್ನು ಗಣಿ ಇಲಾಖೆಗೆ ವಿಲೇವಾರಿ ಮಾಡಲಾಗಿದೆ.

ಈ ಸಂದರ್ಭದಲ್ಲಿ ತಹಸೀಲ್ದಾರ ಅನಿಲ ಬಡಿಗೇರ, ಪಿಎಸ್‌ಐ ಈರಣ್ಣ ರಿತ್ತಿ, ಗಣಿ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.


## ಜಾಗತಿಕ ಗುಣಮಟ್ಟದ ಕ್ರೀಡಾಂಗಣಕ್ಕೆ ಕ್ರಮ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ ಆವರಣದಲ್ಲಿ ಅರ್ಧಕ್ಕೆ ನಿಂತಿರುವ ಅಂತಾರಾಷ್ಟ್ರೀಯ ಕ್ರೀಡಾಂಗಣವನ್ನು ಜಾಗತಿಕ ಗುಣಮಟ್ಟದ ಕ್ರೀಡಾಂಗಣವಾಗಿ ರೂಪಿಸಲು ಕ್ರಮ ಕೈಗೊಳ್ಳಲಾಗುವದೆಂದು ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರ ಮಂಗಳವಾರ ಬೆಳಿಗ್ಗೆ ಕವಿವಿ ಕ್ರೀಡಾಂಗಣ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಏಷ್ಯಾ ಖಂಡದಲ್ಲಿಯೇ ಅತ್ಯಂತ ದೊಡ್ಡದಾದ ಮತ್ತು ನೈಸರ್ಗಿಕವಾಗಿರುವ ಕ್ರೀಡಾಂಗಣ ನಿರ್ಮಿಸಲು 1996ರಲ್ಲಿಯೇ ಕಾಮಗಾರಿ ಆರಂಭಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಕೆಲಸ ನಿಂತಿದೆ. ಈಗ ಪುನಃ ಆರಂಭಿಸಲಾಗುವುದು ಎಂದು ಸಚಿವರು ತಿಳಿಸಿದರು.



ಮುಂದಿನ ಒಂದು ವಾರದಲ್ಲಿ ಜೆಸಿಬಿ ಮೂಲಕ ಕ್ರೀಡಾಂಗಣ ಸ್ವಚತೆ ಕಾರ್ಯ ಕೈಗೊಳ್ಳಲಾಗುವುದು. ಕ್ರೀಡಾಂಗಣ ಸೌಂದರ್ಯೀಕರಣಕ್ಕೆ ಆದ್ಯತೆ ನೀಡಲಾಗುವುದು.

ಬಹು ವಿಧಧ ಕ್ರೀಡೆಗಳನ್ನು ಆಡಲು ಅನುಕೂಲವಾಗುವಂತೆ ಕ್ರೀಡಾಂಗಣ ರೂಪಿಸಲಾಗುವುದು. ಹೆಚ್ಚಿನ ಅನುದಾನಕ್ಕಾಗಿ ಸರಕಾರಕ್ಕೆ ಹೊಸ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಚಿವರು ತಿಳಿಸಿದರು.


ಈ ಸಂದರ್ಭದಲ್ಲಿ ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ, ಮೌಲ್ಯಮಾಪನ ಕುಲಸಚಿವ ಪ್ರೊ .ಎನ್.ವೈ. ಮಟ್ಟಿಹಾಳ, ಕವಿವಿ ಕ್ರೀಡಾ ವಿಭಾಗದ ಮುಖ್ಯಸ್ಥ ಡಾ. ಬಿ.ಎಂ. ಪಾಟೀಲ, ಮಹಾನಗರ ಪಾಲಿಕೆ ಸದಸ್ಯ ಡಾ. ಮಯೂರ ಮೋರೆ ಸೇರಿದಂತೆ ಕವಿವಿ ಅಧಿಕಾರಿಗಳು, ಕ್ರೀಡಾಪಟುಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವಾರ್ಷಿಕ ಮಹಾಸಭೆ, ಪ್ರತಿಭಾ ಪುರಸ್ಕಾರ ಜ.14ಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘ ಗದಗ ಜಿಲ್ಲಾ ಘಟಕದ ವತಿಯಿಂದ ಜ.14ರಂದು ಸಂಜೆ 4 ಗಂಟೆಗೆ ರಾಜ್ಯ ಸರಕಾರಿ ನೌಕರರ ಭವನದಲ್ಲಿ 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಗದಗ ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರ ಮತ್ತು ರಾಜ್ಯ ಸರಕಾರಿ ನೌಕರರ ವಾರ್ಷಿಕ ಮಹಾಸಭೆ ನಡೆಯಲಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ರವಿ ಗುಂಜೀಕರ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಅವರ ಘನ ಉಪಸ್ಥಿತಿಯಲ್ಲಿ ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಪ್ರತಿಭಾ ಪುರಸ್ಕಾರ ಕಾರ್ಯಕ್ರಮನ್ನು ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ.ಎಲ್ ಗುಂಜೀಕರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಲ್ಲಿಕಾರ್ಜುನ ಬಳ್ಳಾರಿ, ಎಸ್.ಬಸವರಾಜು, ಎಸ್.ವಿ. ಸತ್ಯರಡ್ಡಿ, ವಿಶೇಷ ಆಹ್ವಾನಿತರಾಗಿ ಎಸ್.ಎಫ್. ಸಿದ್ದನಗೌಡರ, ಪ್ರಲ್ಹಾದ ಗೆಜ್ಜಿ, ಆರ್.ಎಮ್. ಹೊಲ್ತಿಕೋಟೆ, ಆರ್.ಎಸ್. ಬುರಡಿ, ಎಸ್. ಎಸ್. ಸೋಮಣ್ಣವರ, ವಿ.ಎಂ. ಹಿರೇಮಠ, ಪಿ.ಎಚ್. ಕಡಿವಾಲ, ಎಮ್.ಕೆ. ಲಮಾಣಿ, ಕುಮಾರ ಪೂಜಾರ, ಎಸ್.ಎಸ್. ಕುಚಬಾಳ, ವಸಂತ ಕಲಕಂಬಿ ಆಗಮಿಸಲಿದ್ದಾರೆ.



ಈ ಸಂದರ್ಭದಲ್ಲಿ ಕೋಶಾಧ್ಯಕ್ಷ ಸತೀಶ ಕಟ್ಟಿಮನಿ, ಗೌರವಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ರಾಜ್ಯ ಪರಿಷತ್ ಸದಸ್ಯರಾದ ಶರಣು ಗೋಗೇರಿ ಸೇರಿದಂತೆ ಗದಗ ಜಿಲ್ಲಾ ಸರಕಾರಿ ನೌಕರ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜಿಲ್ಲೆಯ ಸಮಸ್ತ ಸರಕಾರಿ ನೌಕರ ಬಾಂಧವರು ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka